# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ


ಯಕ್ಷಗಾನ ಪ್ರಸಂಗ

# ಗಿರಿಜಾ ಕಲ್ಯಾಣ

ಕವಿ

## ದೇವಿದಾಸ


ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®



Email: yakshaprasangakosha@gmail.com

Blog: www.yakshaprasangakosha.com



ಆವೃತ್ತಿ ೧.೦ ಜುಲೈ ೩೦, ೨೦೧೯

ಯಕ್ಷವಾಹಿನಿ®

Email: yakshaprasangakosha@co.gmailm, yakshavahini@co.gmailm Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**
ಪೌರಾಣಿಕ

**ಆಧಾರ ಗ್ರಂಥ:**
ಶ್ರೀಮದ್ಭಾಗವತ

**ಭಾಷೆ:**
ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**
ಪಾವಂಜೆ ಸೇತು ಮಾಧವ ರಾವ್, ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ (ಇಸವಿ ೧೯೪೮)

**ಹಕ್ಕುಸ್ವಾಮ್ಯ ವಿವರ:**
ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**
೩೮೯

**ಪಾತ್ರಗಳು:**
ಈಶ್ವರ, ದಾಕ್ಷಾಯಿಣಿ, ಪ್ರಮಥ ಗಣ, ದೇವೇಂದ್ರ, ದಿಕ್ಪಾಲಕರು, ದಕ್ಷ, ಋಷಿಗಳು, ಬೃಹಸ್ಪತಿ, ನಾರದ, ವೀರಭದ್ರ, ವಿಷ್ಣು, ಬ್ರಹ್ಮ, ಹಿಮವಂತ, ಮೇನಾದೇವಿ, ಪಾರ್ವತಿ, ಸಖಿಯರು, ದೇವತಾಸ್ತ್ರೀಯರು, ಮನ್ಮಥ, ರತೀದೇವಿ, ಷಣ್ಮುಖ, ತಾರಕಾಸುರ, ಜಂಭ ಮೊದಲಾದ ರಾಕ್ಷಸರು

**ಕಥಾ ಸಾರಾಂಶ:**
ಪರಮೇಶ್ವರನು ದಕ್ಷನ ಮಗಳಾದ ಗೌರಿದೇವಿಯನ್ನು ಮದುವೆಯಾಗಿ ಕೈಲಾಸದೊಳು ವಿಧವಿಧವಾದ ಸಕಲ ಸಾಮ್ರಾಜ್ಯ ವೈಭವದಿಂದ ಇರುತಿರಲು ಒಂದು ದಿನ ಪರಮೇಶ್ವರನು ಅಷ್ಟದಿಕ್ಪಾಲಕರಾದಿ ಸುಮನಸರ ಸಭೆಯಲ್ಲಿ ಕುಳಿತಿರಲು ಅಲ್ಲಿಗೆ ದಕ್ಷನ ಆಗಮನವಾಗುತ್ತದೆ. ಪರಮೇಶ್ವರನನ್ನು ಹೊರತು ಇಡೀ ಸಭೆಯೇ ಎದ್ದು ದಕ್ಷನಿಗೆ ನಮಸ್ಕರಿಸುತ್ತದೆ. ಪರಮೇಶ್ವರನು ಎದ್ದು ತನಗೆ ನಮಸ್ಕರಿಸದೇ ಇರುವುದನ್ನು ಕಂಡ ದಕ್ಷನು ಕೋಪಗೊಂಡು ಪರಮೇಶ್ವರನನ್ನು ಅವಮಾನಿಸಿ ಸಭೆಯಿಂದ ಹೊರಟು ಹೋಗುವನು. ಸಭೆಯಲ್ಲಿ ತಾನು ಅನುಭವಿಸಿದ ಅವಮಾನಕ್ಕೆ ಪ್ರತೀಕಾರವಾಗಿ ತಾನೊಂದು ಮಹಾ ಯಜ್ಞವನ್ನು ನಡೆಸುವ ಸಂಕಲ್ಪ ತೊಟ್ಟು ಪರಮೇಶ್ವರನನ್ನು ಬಿಟ್ಟು ಮಿಕ್ಕೆಲ್ಲಾ ದೇವತೆಗಳಿಗೆ, ಬಂಧುಗಳಿಗೆ ಆಹ್ವಾನವನ್ನು ಕೊಡುತ್ತಾನೆ. ದೇವಾನುದೇವತೆಗಳು, ಮಹಾಬ್ರಾಹ್ಮಣರು ಸಾಲು ಸಾಲಾಗಿ ಯಜ್ಞಕ್ಕೆ ಹೋಗುತ್ತಿರುವುದನ್ನು ಕಂಡ ಗೌರಿಯು ತನ್ನ ತಂದೆಯು ಪ್ರಮಾದದಿಂದಾಗಿ ತಮ್ಮನ್ನು ಕರೆಯುವುದನ್ನು ಮರೆತಿರಬಹುದೆಂದು ತಿಳಿದು ಪತಿಯಾದ ಪರಮೇಶ್ವರನಲ್ಲಿಗೆ ಹೋಗಿ, ನಿಮ್ಮ ಮಾವನವರಾದ ದಕ್ಷ ಮಹಾರಾಜರು ಭಾರಿ ಯಜ್ಞವನ್ನು ಕೈಗೊಂಡಿದ್ದಾರಂತೆ, ಈ ಸಂಭ್ರಮದಲ್ಲಿ ನಮ್ಮೆಲ್ಲಾ ಬಂಧುಗಳು, ಅಕ್ಕ ತಂಗಿಯಂದಿರು ಬಂದು ಸೇರುತ್ತಾರೆ. ಅವರನ್ನು ನೋಡಿ ಮಾತನಾಡಿ ತುಂಬಾ ಕಾಲವಾಯ್ತು, ಏಳಿ ಎದ್ದೇಳಿ ನಾವು ಯಜ್ಞಕ್ಕೆ ಹೋಗೋಣವೆಂದು ಕೇಳುತ್ತಾಳೆ. ಆಗ ಶಿವನು ದಕ್ಷನು ನಮಗೆ ಆಹ್ವಾನವನ್ನು ನೀಡಿರುವುದಿಲ್ಲ, ಆದ್ದರಿಂದ ಅಲ್ಲಿಗೆ ಹೋಗುವುದು ಉಚಿತವಲ್ಲವೆಂದು ಹೇಳಲು; ಗುರುವಿನ ಗೃಹಕೆ, ತಾಯಿ ಗೃಹಕೆ, ಕಾಂತನ ಗೃಹಕೆ, ಅರಸನ ಗೃಹಕೆ ಹೋಗಲು ಆಹ್ವಾನದ ಅಗತ್ಯವಿರುವುದಿಲ್ಲ. ಗಂಡನ ಮನೆಯಲ್ಲಿ ಸಕಲ ವೈಭವವಿರಲು ಸಹ ತಂದೆ ಮನೆಯ ಉತ್ಸವಕ್ಕೆ ಹೋಗುವುದು ತಪ್ಪಲ್ಲ ಎಂದು ಹೇಳಲು; ಶಿವನು, ತಾನೊಂದು ದಿನ ಕುಳಿತಂತಹ ಸಭೆಗೆ ಬಂದ ದಕ್ಷನು ನನ್ನನ್ನು ನಾನಾ ರೀತಿಯಲ್ಲಿ ನಿಂದಿಸಿ ಹೋದ ಕ್ಷಣವನ್ನು ನಾನೆಂದೆಂದಿಗೂ ಮರೆಯಲು ಸಾಧ್ಯವಿಲ್ಲ. ಆ ದ್ವೇಷದಿಂದಾಗಿ ಈಗ ನಮ್ಮನ್ನು ಉದ್ದೇಶಪೂರ್ವಕವಾಗಿ ಕರೆಯಲಿಲ್ಲ. ಅಲ್ಲಿಗೆ ಹೋದರೆ ಖಂಡಿತವಾಗಿಯೂ ಅವಮಾನ ತಪ್ಪಿದ್ದಲ್ಲ. ಯಜ್ಞಕ್ಕೆ ಹೋಗುವುದು ಬೇಡವೆಂದರೂ ಕೇಳದೆ ಗೌರಿಯು ಪತಿಯನ್ನು ವಿವಿಧ ರೀತಿಯಲ್ಲಿ ಪೀಡಿಸಿ ಅನುಮತಿಯನ್ನು ಪಡೆದು ತಂದೆಯ ಮನೆಗೆ ಹೊರಟಳು.

ಯಜ್ಞಕ್ಕೆ ಬಂದಂತಹ ಗೌರಿಯನ್ನು ಯಾರೂ ಮಾತನಾಡಿಸುವುದಿಲ್ಲ. ಅಲ್ಲದೇ ಯಜ್ಞದ ಹವಿಸ್ಸನ್ನು ಶಿವನಿಗೆ ಕೊಡದೇ ಅವಮಾನ ಮಾಡಿದ್ದನ್ನು ಕಂಡ ಗೌರಿಯು ಪತಿಯ ಮಾತನ್ನು ಧಿಕ್ಕರಿಸಿ ಈ ಪಾಪಿಯು ಮಾಡುವ ಯಜ್ಞಕ್ಕೆ ಬಂದು ತಪ್ಪು ಮಾಡಿದೆ. ಈ ದುಷ್ಟ ಪಾಪಿಯ ಉದರದಲ್ಲಿ ತಾನೇಕೆ ಹುಟ್ಟಿದೆನೆಂದು ಮರುಗುತ್ತ ಅಗ್ನಿಕುಂಡಕ್ಕೆಹಾರಿ ಪ್ರಾಣ ತ್ಯಾಗ ಮಾಡಿದಳು. ಈ ವಿಷಯವನ್ನು ಕೇಳಿ ಕ್ರೋಧಗೊಂಡ ಶಿವನ ಜಟೆಯಿಂದ ವೀರಭದ್ರನ ಜನನವಾಗುತ್ತದೆ. ವೀರಭದ್ರನು ಶಿವನ ಆಜ್ಞೆಯಂತೆ ದಕ್ಷನ ಶಿರವನ್ನು ಕತ್ತರಿಸುತ್ತಾನೆ. ಮುಂದಕ್ಕೆ ಗೌರಿಯು ಪರ್ವತರಾಜನ ಮಗಳಾಗಿ ಹುಟ್ಟಿ ಪಾರ್ವತಿಯೆಂಬ ನಾಮಾಂಕಿತದೊಂದಿಗೆ ಬೆಳೆದು ಪುನಃ ಶಿವನ ಮಡದಿಯಾಗುತ್ತಾಳೆ. ಶಿವಪಾರ್ವತಿಯರ ದಾಂಪತ್ಯದ ಫಲವಾಗಿ ಷಣ್ಮುಖನ ಜನನವಾಗುತ್ತದೆ. ಅದೇ ಸಮಯದಲ್ಲಿ ತಾರಕಾಸುರನೆಂಬ ರಕ್ಕಸನು ದೇವತೆಗಳಿಗೆ ಉಪಟಳವನ್ನು ಕೊಡುತ್ತಿದ್ದನು. ತಾರಕಾಸುರನು ತನ್ನ ಮರಣವು ಶಿವನ ಪುತ್ರನ ಹೊರತಾಗಿ ಮಿಕ್ಕವರಿಂದ ಅಸಾಧ್ಯ ಎನ್ನುವ ವರವನ್ನು ಪಡೆದಿರುತ್ತಾನೆ. ದೇವೇಂದ್ರನ ವಿನಂತಿಯ ಮೇರೆಗೆ ಶಿವನು ಷಣ್ಮುಖನನ್ನು ತಾರಕಾಸುರನ ವಧೆಗೆ ಕಳುಹಿಸಿ ಕೊಡುತ್ತಾನೆ. ಷಣ್ಮುಖನು ತಾರಕಾಸುರನನ್ನು ಕೊಂದು ದೇವತೆಗಳನ್ನು ರಕ್ಷಿಸುವನು.

**ಕವಿ ಪರಿಚಯ: (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಉಡುಪಿಯವನಾದ ದೇವಿದಾಸನ ಕಾಲ ಸು. ಕ್ರಿ. ೧೮೦೦ (ಪ್ರಸಂಗದ ವಿಸ್ತೃತ ಅಧ್ಯಯನ: ಕೃಷ್ಣಸಂಧಾನ ಪ್ರಸಂಗ ಮತ್ತು ಪ್ರಯೋಗ : ಮಹಾಪ್ರಬಂಧ, ಎಂ. ಪ್ರಭಾಕರ ಜೋಶಿ ೧೯೯೯). ಇವನ ತಾಯಿ ದೇವಿ ಎಂಬಾಕೆ. 'ಮಧ್ವಪತಿ ಕೃಷ್ಣ' ಎಂಬ ಅಂಕಿತವನ್ನು ಪ್ರಸಂಗದಲ್ಲಿ ಬಳಸಿದ್ದಾನೆ. ಮಾಧ್ವಶಾಸ್ತ್ರಸಾರರೂಪವಾದ 'ಚೌಪದಿಗಳು' ಎಂಬ ಕೃತಿಯೂ ಇವನದೆಂಬ ಉಲ್ಲೇಖವಿದೆ.

ಇವರು ಬರೆದ ಪ್ರಸಂಗಗಳು: ದೇವೀಮಹಾತ್ಮೆ, ದ್ರೌಪದೀ ಸ್ವಯಂವರ, ಬಭ್ರುವಾಹನಕಾಳಗ, ಚಿತ್ರಸೇನಕಾಳಗ, ಅಭಿಮನ್ಯು – ಸೈಂಧವ ವಧೆ, ಗಿರಿಜಾಕಲ್ಯಾಣ, ಕೃಷ್ಣಸಂಧಾನ – ಭೀಷ್ಮಪರ್ವ

**ಟಿಪ್ಪಣಿ:**

ತಾಳಮದ್ದಲೆ ಮತ್ತು ಯಕ್ಷಗಾನ ಎರಡರಲ್ಲೂ ಬಳಕೆಯಲ್ಲಿರುವ ಪ್ರಸಂಗ

# ಪ್ರಸಂಗ ಸಾಹಿತ್ಯ

**ಮೊದಲನೆ ಸಂಧಿ**
**ಶಾರ್ದೂಲವಿಕ್ರೀಡಿತಂ**
ಶ್ರೀರುದ್ರಂ ಕರುಣಾಕರಂ ಪಶುಪತಿಂ ಪಂಚಾನನಂ ಶಂಕರಂ
ಮಾರಾರಿಂ ಶಿಖಿಸೂರ್ಯಚಂದ್ರನಯನಂ ಚರ್ಮಾಂಬರಂ ಧೂರ್ಜಟಿಮ್ ।
ಪಾರಾವಾರಗಭೀರಸ್ಕಂದಜನಕಂ ಗೂಢಾಂಘ್ರಿಸದ್ಭೂಷಣಂ
ತಾರಾಭೂಧರವಾಸಪುಣ್ಯಚರಿತಂ ಶ್ರೀ ಪಾರ್ವತೀಶಂ ಭಜೇ ॥1 ॥

**ದ್ವಿಪದಿ**
ಶ್ರೀಮಧ್ವಮುನಿಪತಿಯ ಮನದಿ ಸಂಸ್ಮರಿಸಿ ।
ಆ ಮಹಾ ಗುರುಹಿರಿಯರಂಘ್ರಿಗಭಿನಮಿಸಿ ॥ 2 ॥
ವರಮಹಾಭಾಗವತಪುಣ್ಯಕಥನದಲಿ ।
ಸುರವರಾರ್ಚಿತೆ ಗೌರಿ ದಕ್ಷಯಜ್ಞದಲಿ ॥ 3 ॥
ಹತವಾಗಿ ಎರಡನೆ ಗಿರೀಂದ್ರ ಸುತೆಯಾಗಿ ।
ಪ್ರತಿವಿವಾಹದಿ ಮಹೇಶನನೊಲಿಸಿ ಪೋಗಿ ॥ 4 ॥
ಅವಳೊಳುದಿಸಿದ ಗುಹನು ತಾರಕಾಸುರನ ।
ಬವರದಲಿ ಗೆಲ್ದುದನು ವಿವರಿಸುವೆ ಹದನ ॥ 5 ॥
ಪ್ರಾಸವಿಷಮಾಕ್ಷರಂಗಳನೊಂದನರಿಯೆ ।
ಲೇಸಾಗಿ ತನ್ನುವನು ಪೊರೆಯೊ ಶ್ರೀ ಹರಿಯೆ ॥ 6 ॥

**ಭಾಮಿನಿ**
ಅದ್ರಿರಾಜಕುಮಾರಿ ಭೈರವಿ ।
ರುದ್ರನರಸಿ ಭವಾನಿ ಗೌರಿ ಸ ।
ಮುದ್ರಶಯನನ ಭಗಿನಿ ಕಾತ್ಯಾಯನಿ ಜಗಜ್ಜನನಿ ॥
ಕದ್ರುಜಾತಸುವೇಣಿ ಪಾರ್ವತಿ ।
ಕ್ಷುದ್ರರಾಕ್ಷಸಕುಲಕುಠಾರಿಣಿ ।
ಭದ್ರಕಾಳಿ ಕರಾಳಿ ಪಾಲಿಸು ಮತಿಗೆ ಸುಜ್ಞಾನ ॥ 7 ||

**ಸೌರಾಷ್ಟ್ರ - ತ್ರಿವುಡೆ**
ವಿದುರನಾ ಮೈತ್ರೇಯ ಮುನಿಪನ ।
ಪದಯುಗಕ್ಕಭಿನಮಿಸಿ ಕೇಳಿದ ।
ನಧಿಕವಹ ಭಾಗವತಕಥನವ । ಮುದದೊಳಂದು ॥ 8 ॥
ಮಾವ ಅಳಿಯಂದಿರಿಗೆ ಮನಮುನಿ ।
ಸಾವ ಕಾರಣ ಬಂತು ದಕ್ಷಮ ।
ಹಾವಿಭುವಿನಧ್ವರದಿ ಗೌರೀ । ದೇವಿಯಂದು ॥ 9 ॥
ದೇಹವನು ತಾ ಬಿಸುಟು ದಿವಿಜಸ ।
ಮೂಹನುತೆ ಎರಡನೆ ಗಿರೀಂದ್ರನ ।
ಮೋಹದಾತ್ಮಜೆಯೆನಿಸಿ ಶಿವಗೆ ವಿ । ವಾಹವಾಗಿ ॥ 10 ॥
ಅವಳೊಳುದಿಸಿದ ಷಣ್ಮುಖನು ನಿಜ ।
ಬವರದಲಿ ತಾರಕನ ಗೆಲ್ದುದ ।
ವಿವರಿಸೆನಗೆಂದೆನುತ ಮುನಿಪುಂ । ಗವನಿಗೆರಗೆ ॥ 11 ॥
ಕೇಳಿಕೊಂಡ ವಿಶಾಲಭಕ್ತಿಗೆ ।
ಶೀಲನಿಧಿ ತಲೆದೂಗಿ ಲಕ್ಷ್ಮೀ ।
ಲೋಲನನು ನೆನೆದುಸಿರತೊಡಗಿದ । ಲೀಲೆಯಿಂದ ॥ 12 ||

**ವಾರ್ಧಕ**
ವಿದುರ ಕೇಳಾದಿನಾರಾಯಣನ ನಾಭಿಯೊಳ್ |
ಪದುಮಭವ ಜನಿಸಿದಂ ಬಳಿಕವನ ಮಾನಸದೊ |
ಳುದಿಸಿದಂ ದಕ್ಷನಾತನ ಸುತೆಯರೊಳಗೆ ಗೌರೀ ದೇವಿಯೆಂಬವಳನು ||
ಮದುವೆಯಾಗುತಲಿ ಮದನಾರಿ ಕೈಲಾಸದೊಳು |
ತ್ರಿದಶರಮರಾಸುರರ ಪೂಜೆಯಂ ಕೈಗೊಳುತ |
ವಿಧವಿಧದ ಸಕಲ ಸಾಮ್ರಾಜ್ಯ ವೈಭವದಿಂದ ಪರಮೇಶನಿರುತಿರ್ದನು || 13 ||

**ಭಾಮಿನಿ**
ಒಂದು ದಿನ ಸತ್ರದಲಿ ನೆರೆದುದು |
ಬಂದು ದಿಕ್ಪಾಲಾದಿ ಸುಮನಸ |
ಸಂದಣಿಗಳೊಪ್ಪಿರುವ ಸಭೆಗಾ ದಕ್ಷನಯ್ತಂದ ||
ವೃಂದವೆದ್ದಿದಿರಾಗಿ ಭಯದಲಿ |
ವಂದಿಸುತ್ತಿರಲೀಶನೇಳದೆ |
ಚಂದದಿಂ ಕುಳಿತಿರಲು ಕಂಡಾ ದಕ್ಷ ಖತಿಗೊಂಡ || 14 ||

**ಕಾಂಭೋಜಿ - ಝಂಪೆ**
ಈ ಸಕಲ ಸಭೆಯೆದ್ದಿದಿರ್ಗೊಳುತಲಿರಗಿದು ಸ |
ದಾಶಿವನು ಏಳದಿರುತಿಹನು ||
ಈಶ ತಾನೆಂದೆಂಬಹಂಕಾರದಿಂದಿವನಿ |
ಗೀಸು ಗರ್ವವು ದೊರಕಿತಲ್ಲ || 15 ||
ಏಳದಿರ್ದರು ಮಾತಿನಿಂದುಚಿತವಚನಗಳ ಪೇಳಿ ತನ್ನುವನು ಮನ್ನಿಸಲು ||
ನಾಲಿಗೆಗೆ ಬಂದ ಕುಂದೇನು ಶ್ರೇಷ್ಠತ್ವಕ್ಕೆ |
ಖೂಳನಿಗೆ ಬಂದ ಕುಂದೇನು || 16 ||
ಸರಸಿಜಾಸನನೆಂದ ನುಡಿಗೆ ನಾ ಮರುಳಾಗಿ |
ತರಳೆಯನು ಕೊಟ್ಟೆನು ನಿರರ್ಥ ||
ಪರಿಕಿಸಲು ಕೋಡಗನ ಕೈಯ ಮಾಲೆಯ ಕೊಟ್ಟ |
ತೆರನಾದುದಕಟೆನ್ನ ಬದುಕು || 17 ||
ಯಾಕೆ ಬಂದೆನು ತಾನು ಪಾಪಿ ಈಶನ ಬಳಿಗೆ |
ಮೂಕರಂದದಿ ಕುಳಿತೆ ಇರುವ ||
ಬಾಕಿ ಜನರಂತರಲ್ಲ ತಾ ಪಿನಾಕಿಯುಯೆಂಬ |
ಈಸು ಗರ್ವವು ಬಂದುದಲ್ಲ || 18 ||
ಸ್ನಾನವಿಲ್ಲವು ಜಪಾನುಷ್ಠಾನ ಮೊದಲಿಲ್ಲ |
ಸ್ಥಾನವೆ ಸ್ಮಶಾನ ಭಸ್ಮಾಂಗ ||
ಸೈನಿಕ ಪಿಶಾಚ ಭೂತಗಳು ನಮ್ಮಂತರವ |
ನೇನರಿವನೀ ದುರಾತ್ಮಕನು || 19 ||
ಅಸುರರತಿ ಮಾಂಸಾಹಾರಿಗಳು ಪಾಷಂಡಿಗಳು |
ವಸುಧೆಗಗ್ಗದ ದೈವವೆಂದು ||
ಉಸಿರುವವರು ಹೊರತು ನಮಗೀತ ಮಾನ್ಯನೆ ಎನುತ |
ಕೊಸರಿ ಸಭೆಯಿಂದ ಹೊರವಂಟ || 20 ||

**ಸೌರಾಷ್ಟ್ರ - ಅಷ್ಟ**

ಸುಮ್ಮನೆ ಬಗುಳದಿಂದು । ನಿಜ ।
ಬ್ರಹ್ಮಮಾನಸಪುತ್ರನೆಂದು ॥
ಹೆಮ್ಮೆಯಿಂದಾಡಲು ।
ಒಮ್ಮೆ ಸೈರಿಸಿದೆವು ।
ನಮ್ಮ ತಳ್ಳಿಯು ಬೇಡ ।
ಸುಮ್ಮನೆ ತೆರಳಲಿ ॥ 21 ॥
ಯಾವ ದೇಶದ ದೊರೆಯೀತ । ನೆಂದು ।
ಭಾವಶುದ್ಧದೊಳು ಯೋಚಿಸುತ ॥
ನಾವು ಪೂಜಿಸುವೆವೆ ।
ಎನುತ ಈಶನು ಪೇಳೆ ।
ದೇವ ಸಭೆಯ ಬಿಟ್ಟು ತೆರಳಿದ ದಕ್ಷನು ॥ 22 ॥
ಬಂದು ತಾತಂಗೆರಗಿ ನುಡಿದ । ತನ ।
ಗಿಂದು ಈಶನು ಜರೆದೊರೆದ ॥
ಮಂದಿ ಮಾರ್ಬಲವಿಲ್ಲ ಇಂದು ರಾಜ್ಯಗಳಿಲ್ಲ ।
ಎಂದೂ ಇಲ್ಲದ ಅಪ ।
ಮಾನವ ಹೊಂದಿದೆ ॥ 23 ॥

**ಭಾಮಿನಿ**

ಹರಿದುದೋಲಗವಂದು ಮೊದಲಾ ।
ಗಿರದೆ ಮನಮುನಿಸಳಿಯನೊಡನನ ।
ವರತ ದಕ್ಷಂಗಾಗೆ ಕಾಲಾಂತರಕೆ ಕಮಲಜನು ॥
ವರ ಪ್ರಜಾಧೀಶ್ವರರಿಗಿವನೀ ।
ಶ್ವರನೆನುತ ಪಟ್ಟವನು ಕಟ್ಟಲು ।
ಭರಿತವಾದುದು ಮತ್ತೆ ಮದವಂಕುರಿಸುತಡಿಗಡಿಗೆ ॥ 24 ॥

**ಸಾಂಗತ್ಯ - ರೂಪಕ**

ಒಂದು ದಿವಸ ಬೃಹಸ್ಪತಿಯನು ಕರೆಸುತಿಂ ।
ತೆಂದನು ದಕ್ಷನಧ್ವರಕೆ ॥
ಚಂದದಿ ಸಕಲ ಸಾಹಿತ್ಯವ ರಚಿಸುವೆ ।
ನಿಂದೆಸಗೆನಲೆಂದನವನು ॥ 25 ॥
ಅನುಮಾನವೇನು ಕೇಳೀರೇಳು ಜಗ ನಿನ್ನಾ ।
ಧೀನವಿರಲೀ ಮಹಾಧ್ವರವು ॥
ನಿನಗೆ ದೊಡ್ಡಿತೆ ಸಾಹಿತ್ಯಗಳನ್ನು ತರಿಸು ನಾ ।
ನನುಕರಿಸುವೆನು ನೋಡೆಂದ ॥ 26 ॥
ಅಷ್ಟದಿಕ್ಪಾಲರಿಗಖಿಲ ಲೋಕಂಗಳಿ ।
ಗಟ್ಟಿದರಖಿಳ ಚಾರಕರ ॥
ಸೃಷ್ಟಿಪಾಲರನ್ನೆಲ್ಲ ಬರೆಸಲು ಬಂಧುಗ ।
ಳೊಟ್ಟಾಗಿ ಕೂಡಿದರಂದು ॥ 27 ॥
ಶಂಕರನುಳಿಯೆ ಮಿಕ್ಕಾದ ದೇವರ್ಕಳು ।
ಶಂಕೆಯಿಲ್ಲದ ಋಷಿವರರು ॥
ಪಂಕಜಮುಖಿಯರನೇಕರು ಸರ್ವರ ।
ಲಂಕಾರದಿಂದ ಕೂಡಿದರು ॥ 28 ॥

**ಭಾಮಿನಿ**
ಕುರುಕುಲಾಗ್ರಣಿ ಕೇಳು ವಿವರಿಸ |
ಲರಿದನಂತನಿಗಖಿಳ ವಿಭವವ |
ಪರಿಪರಿಯ ಭೂಸುರರು ನೆರೆದಯ್ತರುವ ಸಂಭ್ರಮವ ||
ವರ ಮಹಾಕೈಲಾಸ ಶಿಖರದಿ |
ಹರನರಸಿ ಕಂಡಾಗ ಕೌತುಕ |
ವೆರಸಿ ಭೂಸುರನೋರ್ವನನು ಬೆಸಗೊಂಡಳುಮೆ ಕರೆಸಿ || 29 ||

**ದೇಶಿ - ಏಕ**
ಆವಲ್ಲಿಂದ ಬಂದಿರಯ್ಯ ಭೂಮಿದೇವ | ಶತ |
ಸಾವಿರವು ಪೋಪುದೆಲ್ಲಿ | ಭೂಮಿದೇವ ||
ಈ ವಿಧದ ಭೂಸುರರು | ಭೂಮಿದೇವ | ನೀವಿಂ |
ದಾವಲ್ಲಿಗೆ ಪಯಣವಯ್ಯ | ಭೂಮಿದೇವ || 30 ||
ಹೆಂಡಿರು ಮಕ್ಕಳು ಸಹ | ಭೂಮಿದೇವ | ಕೂಡಿ |
ಕೊಂಡು ಪೋಪ ಕಾರ್ಯವೇನು | ಭೂಮಿದೇವ ||
ಕಂಡರೆ ಕೌತುಕವಿಂದು | ಭೂಮಿದೇವ | ಬೆಸ |
ಗೊಂಡರೆ ಪೇಳಿದನಂದು | ಭೂಮಿದೇವ || 31 ||
ದಕ್ಷನ ಯಾಗಕ್ಕೆ ನಾವು | ಪೋಪೆವಮ್ಮ | ಬಹು |
ದಕ್ಷಿಣೆಗಳನೀವರಂತೆ | ಕೇಳಿರಮ್ಮ ||
ಲಕ್ಷಸಂಖ್ಯೆ ಧನದ ರಾಶಿ | ಬೆಟ್ಟವಮ್ಮ | ನಮ್ಮಾ |
ಪೇಕ್ಷಗಳನೀವರಂತೆ | ಪೋಪೆವೆಮ್ಮ || 32 ||
ಅರಿಯಲವರ ಮಗಳಲ್ಲವೆ | ನೀವು ಅಮ್ಮ | ಪೋಗ |
ದಿರುವ ಕಾರಣಂಗಳೇನು | ಪೇಳಿರಮ್ಮ ||
ಮರೆತರೋ ನಿಮ್ಮನು ಕರೆಯ | ಲೇನಿದಮ್ಮ | ಆದ |
ರಿರಲೆಮ್ಮ ಸಂಗಡ ಬನ್ನಿ | ಪೋಗುವಮ್ಮ || 33 ||

**ಭೈರವಿ - ಝಂಪೆ**
ಇಂತೆಂದು ಭೂಸುರನು | ತಾಂ ತೆರಳಲಿತ್ತ ಗುಣ |
ವಂತೆ ಪಾರ್ವತಿ ಮನದಿ | ಚಿಂತಿಸುತಲಂದು || 34 ||
ಮರೆತರೆಮ್ಮನು ಪೇಳ | ಲಿರಲಾರದೆನ್ನ ಪತಿ |
ಗರುಹಿ ಕರೆದೊಯ್ವೆನಾ | ವರ ಮಹಾಧ್ವರಕೆ || 35 ||
ಬಂಧುಗಳ ಕಾಣದತಿ | ಬಹುದಿವಸವಾಯ್ತಲ್ಲಿ |
ಬಂದು ಕೂಡುವರೆಲ್ಲ | ರೊಂದುಳಿಯದಂತೆ || 36 ||
ಅವರೊಡನೆ ಮಾತಾಡ | ಲವಕಾಶವಿದೆಯೆನುತ |
ಶಿವಗೆರಗಿ ಮನದೀಪ್ಸಿ | ತವನೊರೆದಳಾಗ || 37 ||

**ಕೇದಾರಗೌಳ - ಅಷ್ಟ**
ನೋಡಿರಿ ದ್ವಿಜರು ಪೋಪುದನು ನಿಮ್ಮಯ ಮಾವ |
ಮಾಡುವ ಯಜ್ಞವಂತೆ ||
ಆಡಲೇನಧಿಕ ಸಂಭ್ರಮವಂತೆ ಬಂಧುಗಳ್ |
ಕೂಡಿ ರಂಜಿಸುವರಂತೆ || 38 ||

ಕೇಳಿ ಸೈರಿಸದೆನ್ನ ಮನವಲ್ಲಿ ಪೋಗದೆ |
ಏಳಿ ನೀವಿಂದಿನಲಿ ||
ಲೀಲೆಯಿಂದಖಿಳ ವೈಭವಗಳ ನೋಡಿದ್ದು |
ನಾಳೆ ಬರುವುದಿಲ್ಲಿಗೆ || 39 ||
ಅಲ್ಲಿ ಎನ್ನಕ್ಕತಂಗ್ಯಂದಿರು ಬಾಂಧವ |
ರೆಲ್ಲ ಕೂಡಿರ್ಪರಂತೆ ||
ಬನ್ನಿರಿ ಬಹುಕಾಲವಾಯ್ತು ಕಾಣದೆ ಮನ |
ನಿಲ್ಲದು ಎನಗೆಂದಳು || 40 ||
ಅರುಹಿಸದಯ್ದುವುದನುಚಿತವೆನಬೇಡ |
ವರುಹಬೇಕೆಂಬುದಿಲ್ಲ ||
ಗುರುವಿನ ಗೃಹಕೆ ತಾಯ್ ಗೃಹಕೆ ಕಾಂತನ ಗೃಹ |
ಕರಸನ ಗೃಹಗಳಿಗೆ || 41 ||
ಪತಿಯಲ್ಲಿ ಬೇಕಾದ ವೈಭವವಿರ್ದರು |
ಪಿತೃಗೃಹದುತ್ಸವಕೆ ||
ಸತಿಯರು ಬಯಸುವುದುಚಿತ ಪೋಗುವದೆಂದೆ |
ನ್ನುತ ಪಾದಕೆರಗಲೆಂದ || 42 ||

**ಮಧುಮಾಧವಿ - ಏಕ**
ಒಂದು ದಿವಸ ತಾನು ಕುಳಿತಿರ್ಪ ಸಭೆಗೆ |
ಬಂದನು ದಕ್ಷ ನಾನೇಳದ ಬಗೆಗೆ ||
ನಿಂದಿಸಿ ಜರೆದೆನ್ನ ನುಡಿದಂಥ ನುಡಿಯ |
ಎಂದೆಂದಿಗದನು ನಾ ಮರೆವೆನೆ ಪರಿಯ || 43 ||
ಆ ದ್ವೇಷದಲಿ ನಮ್ಮ ಕರೆಯಲಿಲ್ಲಿಂತು |
ಆ ದುಷ್ಟ ಕ್ರುತುವಿಗೆ ಪೋಪೆ ತಾನೆಂತು ||
ಸಾಧಿಸುವರು ಹಗೆತನವ ನಮ್ಮೊಳಗೆ |
ಪೋದರೆ ಅವಮಾನ ತಪ್ಪದು ಕಡೆಗೆ || 44 ||
ಬಂಧುಗಳನು ಕಾಣಬೇಕೆಂಬ ಮೋಹ |
ಬಂದಿದೆ ನಿನಗೆಂದಿನಂತಿಲ್ಲ ಸ್ನೇಹ ||
ನಿಂದಿಪ ಜನರಲ್ಲಿಗಯ್ದುವನಲ್ಲ |
ಇಂದು ನೀ ಪೋಗುವುದುಚಿತವಿದಲ್ಲ || 45 ||

**ಭಾಮಿನಿ**
ಬೇಡ ಹೋಗದಿರೆಂಬ ವಚನವ |
ನಾಡಿ ಕೆಡಿಸದಿರೆಂದು ಪತಿಯನು |
ಕಾಡಿದಳು ಕಮಲಾಕ್ಷಿ ಕಂಬನಿದುಂಬಿ ಗೋಳಿಡುತ ||
ನೋಡಿ ಪುರಹರ ಬಂತಿವಳ್ಗತಿ |
ಕೇಡೆನುತ ನಿಶ್ಚಯಿಸಿ ಮಿಗೆ ಮಾ |
ತಾಡದತಿ ಮೌನವನು ತಾಳ್ದಿರಲೆಂದಳಬುಜಾಕ್ಷಿ || 46 ||

**ನೀಲಾಂಬರಿ - ತ್ರಿವುಡೆ**
ನಿಲ್ಲದು ಮನವಲ್ಲಿ ಪೋಗದೆ | ಪ್ರಾಣ |
ದೊಲ್ಲಭ ಕಳುಹಿಸಲಾಗದೆ ||
ನಿಲ್ಲದೆ ಬಹೆ ನಾಳೆ ಎಂದಳು | ಪತಿ |
ಗಲ್ಲವ ಪಿಡಿದು ಮುದ್ದಿಸಿದಳು || 47 ||

ಮಾತಾಡದಿರ್ಪುದೇಕೆಂಬಳು । ತಾನೆ ।
ಮಾತಾಡುತೆರಗಿ ಬೀಳ್ಕೊಂಬಳು ॥
ಕಾತುರದಿಂದೆದ್ದು ನಡೆವಳು । ಜಗ ।
ನ್ಮಾತೆ ಪಿಂತಿರುಗಿ ನಿಟ್ಟಿಸುವಳು ॥ 48 ॥
ಮುನಿಸೇನು ಪೇಳಿರಿಂತೆಂಬಳು । ಬಂ ।
ದಿನಿಯನನಪ್ಪಿ ಮುದ್ದಿಸುವಳು ॥
ಮನವಿಟ್ಟು ಕಳುಹಬೇಕೆಂದಳು । ಮೌನ ।
ವಿನಿತೇಕೆಂದೆರಗಿ ಚಿಂತಿಸುವಳು ॥ 49 ॥
ತಾಯಿ ಮುಂತಾದ ಬಾಂಧವರನ್ನು । ನೋಳ್ಪ ।
ಮಾಯಪಾಶಗಳೆಳೆಯಲು ತಾನು ॥
ಪ್ರೀಯನ ಬಿಡಲಾರದಳಲುತ್ತ । ಜಗ ।
ನ್ಮಾಯೆ ತಾನತ್ತಿತ್ತಲೋಡುತ್ತ ॥ 50 ॥

**ಭಾಮಿನಿ**

ಹಲವು ಪರಿಯಲಿ ಕಾಂತೆ ನಿಜಕಾ ।
ದಲಗೆ ಕರುಣವ ತೋರಿ ಚಿತ್ತವ ।
ನೊಲಿಸಲಾರದೆ ಬಂಧುದರ್ಶನಪಾರವಶ್ಯದಲೆ ॥
ನಿಲಯವನು ಹೊರವಂಟಳಂಗನೆ ।
ಬಳಲಿ ಬಿಸುಸುಯ್ಯುತ್ತ ಪೋಗಲು।
ಬಳಿಯಲಯ್ದಿತು ಈಶ್ವರಾಜ್ಞೆಯ ಮೇಲೆ ಪರಿವಾರ ॥ 51 ॥

**ಬೇಗಡೆ - ಅಷ್ಟ**

ಬಂದಳು । ದೇವಿ । ಬಂದಳು ॥ ಪ ॥
ಬಂದಳಂದು ಕಂದಿ ಕುಂದಿ ।
ನೊಂದು ಬೆಂದು ತಂದೆ ಮನೆಗೆ ॥ ಬಂದಳು ॥ ಅ. ಪ ॥
ಪಟ್ಟೆಸೀರೆಯ ನಿರಿ ।
ಯುಟ್ಟು ದಿವ್ಯ ರವಕೆಗಳನು ।
ತೊಟ್ಟು ರವಿಯಂತೆ ಬೆಳಗು । ತಷ್ಟದೆಸೆಯಲಿ ॥
ಕಟ್ಟಿದಾ ಸಿರಿಮುಡಿಗೆ ಜಡೆ ।
ಗಟ್ಟಿ ನವಮಲ್ಲಿಗೆ ಜಾಜಿ ।
ಇಟ್ಟಣಿಸಿ ಬಂದಳಂದು ।
ಸೃಷ್ಟಿಗೆ ಕೌತುಕವಾಗಿ ॥ ಬಂದಳು ॥ 52 ॥
ಅಂಬಿಕೆಯ ಪಾಲಕಿಯೊಳು ।
ಸಂಭ್ರಮದೊಳೇರಿಸುತ್ತ ।
ಕೊಂಬು ವೀಣೆ ಕಹಳೆ ವಾದ್ಯ । ವೆಂಬ ಘೋಷದಿ ॥
ಬೆಂಬಿಡದೆ ಛತ್ರ ಚಾಮರ ।
ವಂಬರಾಗ್ರ ತುಂಬಲಾಗ ।
ತುಂಬುರು ನಾರದರ ವೀಣಾ ।
ಡಂಬರದ ಡೊಂಬಿನಿಂದ ॥ ಬಂದಳು ॥ 53 ॥
ಮುತ್ತಿನೋಲೆ ಹಾರ ದಿವ್ಯ ।
ಕೆತ್ತಿಗೆಯ ಬಾವಲೀ ವಿ ।
ಚಿತ್ರವಾದ ಬಣ್ಣ ಸರ । ಪುತ್ಥಳಿ ಮಾಲೆ ॥
ಕಸ್ತೂರಿಯ ಬೊಟ್ಟು ನಾನಾ ।
ರತ್ನದ ಪದಕದ ಮೇಲೆ ।
ಉತ್ತಮ ಸರಪಣಿ ಗೆಜ್ಜೆ ।
ವಿಸ್ತಾರದಾಭರಣದಿಂದ ॥ ಬಂದಳು ॥ 54 ॥

**ವಾರ್ಧಕ**
ಪರಿಪರಿಯ ವೇದಗಳ ಘೋಷದಿಂ ತೋಷದಿಂ |
ನೆರೆದಿರುವ ಸಕಲ ಮುನಿಜಾಲದಿಂ ಮೇಳದಿಂ |
ದುರುತರದಿ ಮೆರೆವಧಿಕ ಹೋಮದಿಂ ನೇಮದಿಂದಖಿಳ ಸಂಭ್ರಮಗಳಿಂದ ||
ಸುರಪ ಮುಖ್ಯಾಮರರ ವರ್ಗದಿಂ ಸ್ವರ್ಗದಿಂ |
ದೆರಡುವಡಿಯತಿಶಯಾನಂದದಿಂ ಚಂದದಿಂ |
ಧರೆಗೆ ನೂತನವಾದ ಮಂತ್ರದಿಂ ತಂತ್ರದಿಂ ಮೆರೆದುದಾ ಯಜ್ಞಶಾಲೆ || 55 ||

**ಭಾಮಿನಿ**
ಆ ಮಹಾಧ್ವರದೆಡೆಗೆ ಭುವನ |
ಸ್ತೋಮವಂದಿತೆ ಬಂದು ಬಂಧು |
ಸ್ತೋಮ ತಾಯ್ತಂದೆಯರು ಕಾಣುತ ಕಾಣದಂದದಲಿ ||
ಕೋಮಲೆಯನೇನೆಂದು ನುಡಿಸದೆ |
ತಾವ್ ಮುದದಿ ಕುಳ್ಳಿರಲು ಸತಿ ಚಿಂ |
ತಾಮಹೋದಧಿಯೊಳಗೆ ಮುಳಗಿದಳಧಿಕ ಬೆರಗಿನಲಿ || 56 ||

**ಕಂದ**
ಯಾಗದ ಸೊಬಗೀಕ್ಷಿಸಿ ಪತಿ |
ಭಾಗವನಿಡದಿರ್ಪ ಕ್ರತುವ ನಿರುಕಿಸುತಾಗಂ ||
ತೂಗುತ ಶಿರಮಂ ಹರ ಹರ |
ಈ ಗತಿ ತನಗಾಯ್ತೆನುತ್ತಳಲಿದಳು ಸಭೆಯೊಳ್ || 57 ||

**ನೀಲಾಂಬರಿ - ರೂಪಕ**
ಏತಕೆ ಬಂದೆನು ತಾನೀ |
ಪಾತಕಿ ಮಾಡುವ ಯಜ್ಞದ |
ರೀತಿಯನೊಂದರಿಯದೆ ಬಂ |
ದೀ ತೆರನಾದುದಲಾ || ಏತಕೆ || ಪ ||
ಪತಿಗಳಿಗೀತ್ರೈಲೋಕ್ಯದಿ |
ಕ್ರತುವಿನ ಭಾಗವ ಕೊಡದಿಹ |
ಮತಿಯುತರ್ ಯಾರೀ ಬುದ್ಧಿಯು | ಪಿತಗೇತಕೆ ಬಂತು ||
ಅತಿದುಷ್ಟರು ಕೂಡಿಹ ದು |
ರ್ಮತಿಗಳ ಮಧ್ಯಕೆ ತಾನೇ |
ತಕೆ ಬಂದೆನು ಹಾ ವಿಧಿಯೆ |
ಗತಿಯೇನಕಟಕಟ || ಏತಕೆ || 58 ||
ಕಾಣುತ ತಾಯ್ತಂದೆಗಳಿಂ |
ದೇನುವನುಸಿರದೆ ಪೋದರು |
ಈ ನಮ್ಮಕ್ಕತಂಗ್ಯಂದಿರು |
ಈ ನೆಂಟರು ಜನರು ||
ಏನೆಂದುಸಿರದೆ ಕುಳಿತಿಹ |
ರೇನತಿ ದ್ರೋಹವ ಗೆಯ್ದೆನೊ |
ಏನೆಂದರಿಯದೆ ಇಂತಪ |
ಮಾನವು ದೊರಕಿತಲಾ || ಏತಕೆ || 59 ||

ಪೋಗದಿರಿಂದಿಲಿ ಪೋದರೆ |
ಆಗುವುದೀಪರಿಯೆಂದೆನು |
ತಾಗಲೆ ಪತಿಗಳು ಪೇಳ್ವುದ |
ನೀಗಿ ನಾ ಬಂದೆನಲಾ ||
ಪೋಗಿ ನಾನರಸರಿಗೆಂತಿದ |
ರಾಗಮವುಸಿರಲಿ ದೇಹ |
ತ್ಯಾಗವೆ ಲೇಸೆಂದತಿಶಯ |
ವಾಗಿಯೇ ಹೊರಳಿದಳು || ಏತಕೆ || 60 ||

**ಆನಂದಭೈರವಿ - ಏಕ**

ದುಷ್ಟ ಪಾಪಿಯುದರದಲಿ |
ಪುಟ್ಟಿದೇ ತಾನೇತಕೆಂದು | ಬೈದಳು |
ಮರುಗಿ | ಸುಯ್ದಳು || 61 ||
ನೀತಿಯನೀತಗೆ ಪೇಳಿ |
ದೀ ತೆರನ ಕ್ರತುವ ವ್ಯರ್ಥ | ಗೆಯ್ದರೆ |
ಕೊರಳ | ಕೊಯ್ದರೆ || 62 ||
ಈ ಸಮಸ್ತರೆನ್ನ ಪತಿಯ |
ದ್ವೇಷವ ಸಾಧಿಸಿನ್ನೆಂತು | ಬಾಳ್ವರು |
ನರಕ | ವಾಳ್ವರು || 63 ||
ಹರ ಹರಾ ವಿಧಾತನಿಂತು |
ಬರೆದನೇ ದುಷ್ಟಾತ್ಮನೆಂದು | ಬಿದ್ದಳು |
ಹೊರಳುತ್ತಿದ್ದಳು || 64 ||

**ಭಾಮಿನಿ**

ನಕ್ಕನಾ ಭಗ ಭೃಗುಮುನೀಶ್ವರ |
ನಿಕ್ಕೆಲಕೆ ಕಣ್ಣನ್ನೆ ಮಾಡಿದ |
ಮಿಕ್ಕ ಮುನಿಗಳು ಸುರರು ಕಿರುನಗೆ ಸೂಸಲೀಕ್ಷಿಸುತ ||
ಉಕ್ಕಿದವು ಕಿಡಿ ಕಂಗಳಲಿ ಪ್ರಳ |
ಯಾರ್ಕ ಶಿವನೋಲ್ ಜ್ವಲಿಸಿ ನೋಡಿ ಸು |
ರರ್ಕಳನು ರೋಷದಲಿ ತಂದೆಗೆ ನುಡಿದಳಬುಜಾಕ್ಷಿ || 65 ||

**ಸೌರಾಷ್ಟ್ರ - ತ್ರಿವುಡೆ**

ವಿಕಲಮತಿ ಕೇಳೆಲವೊ ಸರ್ವಾ |
ತ್ಮಕನೊಡನೆ ಹಗೆತನವ ಸಾಧಿಸಿ |
ಸುಕೃತಹೀನನೆ ಕೆಡಿಸಿಕೊಂಡೈ| ಮಖವ ನೀನು || 66 ||
ಮೃತ್ಯುವಿಗೆ ತಾ ಮೃತ್ಯುವಹ ಪರ |
ವಸ್ತುವಿನನವಘಡಿಸಿ ಬರಿದೇ |
ಮೃತ್ಯುವಿನ ವಶವಾಗಿ ಕೆಟ್ಟೆ ನಿ | ರರ್ಥವಾಗಿ || 67 ||
ಕೂಡಿದೀ ಸುರವರರು ಋಷಿಗಳು |
ಮಾಡಿದಪರಾಧಕ್ಕೆ ಶಿಕ್ಷೆಯ |
ಮಾಡುವರು ನಮ್ಮವರು ಸಂಶಯ | ಬೇಡ ನಿಮಗೆ || 68 ||
ಸಾಕು ನಿನ್ನಿಂದಾದ ದೇಹವಿ |
ದೇಕೆ ಸುಡು ಸುಡು ದಕ್ಷಮಗಳು ಪಿ |
ನಾಕಿಯರ್ಧಶರೀರವೆಂಬರು | ಲೋಕಜನರು || 69 ||

ನಿನ್ನ ಮಗಳೆಂದೆಂಬ ಪೆಸರನು |
ಇನ್ನು ನಾನಿದನೊಲ್ಲೆ ದೇಹವ |
ನಿನ್ನ ಮುಂದಗ್ನಿಗೆ ಸಮರ್ಪಿಪೆ | ಕುನ್ನಿ ಕೇಳು || 70 ||

**ಭಾಮಿನಿ**
ಎನುತ ಯೋಗಾಗ್ನಿಯಲಿ ಪಾವಕ |
ನನು ನಿಜಾಂಗದಿ ಧರಿಸಿ ದೇಹವ |
ನನಲಗಾಹುತಿಗೊಟ್ಟಳಯ್ದಿದಳವಳು ಶಿವಪದವ ||
ಇನಿತು ಕಂಡಾ ನೆರವಿ ದಕ್ಷನ |
ತನತನಗೆ ಬೈವುತಿರೆ ಬಳಿಕಾ |
ಕ್ಷಣದಿ ಭೂತವ್ರಾತ ಕವಿದುದು ಯಾಗಮಂಟಪವ || 71 ||

**ಶಂಕರಾಭರಣ - ಮಟ್ಟೆ**
ವಿದುರ ಕೇಳು ಸತಿಯ ಮರಣ ಕಂಡು ಪ್ರಮಥರು |
ಕೆದರಿ ಹೋಮಗೆಯ್ವ ಜನರನೊತ್ತಿ ತಿವಿದರು ||
ಮುದದಿ ದಕ್ಷನೆಂಬ ನೃಪನನೊದಗಿ ಕೊಲ್ಲಲೊ |
ಕದಡಿ ಹೋಮಗಳನು ಕೆಡಿಸಿ ಸದನ ಮುರಿಯೆಲೊ || 72 ||
ಎಂದು ಸಕಲ ಯಜ್ಞಮಾಂತ್ರಿಕರನು ಎಳೆದರು |
ತಿಂದು ಸಕಲ ದ್ರವ್ಯಗಳನು ತೇಗಿ ನಲಿದರು ||
ಇಂದ್ರ ಕಾಣುತೆದ್ದು ಕ್ರತುವ ಕೆಡಿಸಬಂದಿರೆ |
ಮಂದಮತಿಗಳೆಮ್ಮ ಬಗೆಯ ತಿಳಿಯದಾದಿರೆ || 73 ||
ಹುಚ್ಚರಾದಿರೆನುತ ಕಾದಿ ಸುರಪ ಸಹಿತಲಿ |
ಆ ಕ್ಷಣದಲಿ ಸೋತು ತಿರುಗಲೀಕ್ಷಿಸುತ್ತಲಿ ||
ಅಕ್ಷಿಗಳಲಿ ಕಿಡಿಯನುಗುಳಿ ಭೃಗುಮುನೀಂದ್ರನು |
ದಕ್ಷಪತಿಯ ಕೊಂದು ಕ್ರತುವ ಕೆಡಿಸುವವರನು || 74 ||
ತೋರೆನುತ್ತ ಭೂತನಿಕರಗಳನು ಮಂತ್ರಿಸಿ |
ಭೋರನಾಹುತಿಯನು ತೆಯ್ದನಿರದೆ ಹೋಮಿಸಿ ||
ಘೋರ ಮಂತ್ರಹತಿಗೆ ನಿಲ್ಲದಖಿಲ ಪ್ರಮಥರು |
ದಾರಿದೆಗೆದು ಕಂಡಕಡೆಗೆ ಹಾಯ್ದರಥಟರು || 75 ||

**ಭಾಮಿನಿ**
ಕುರುಕುಲಾಗ್ರಣಿ ಕೇಳು ಪರಮೇ |
ಶ್ವರನ ಬಲ ಪಿಂತೋಡುತಿರಲಾ |
ಹರುಷದಲಿ ಮುನಿನಿಕರ ಕೂಡಿತು ಮಾಡಿತಧ್ವರವ ||
ಸುರಮುನಿಪ ನಾರದನು ಬಳಿಕೀ |
ತೆರನ ವಾರ್ತೆಯನೀಶ್ವರಂಗೆ |
ಚ್ಚರಿಸಲಯ್ದಿದನಾ ಮಹಾ ಕೈಲಾಸಪರ್ವತಕೆ || 76 ||

**ಸಾಂಗತ್ಯ - ರೂಪಕ**
ಆದಿತ್ಯನಂತೆ ಶೋಭಿಸುತ ಶ್ರೀಹರಿ ಜಗ |
ದಾದಿಕೇಶವ ಸಲಹೆನುತ ||
ಆ ದಿವ್ಯಮುನಿ ನಡೆತರಲುಪಚರಿಸಿ ಮ |
ತ್ತಾದಿಮೂರುತಿ ಬೆಸಗೊಂಡ || 77 ||

ಮುನಿಪ ಲಾಲಿಸಿ ಕೇಳೆಮ್ಮೊನಿತೆ ದಕ್ಷಾಧ್ವರ |
ಕೆನುತ ಪೋಗಿಹಳಲ್ಲಿ ನಡೆದ ||
ಘನ ಪೊಸ ವಾರ್ತೆಯೇನುಂಟು ನೀ ತಿಳಿದಿರ್ದ |
ಡೆನಗರುಹೆನಲೆದ್ದು ನಗುತ || 78 ||
ಪಾದಕೊಂದಿಸುತೆಂದ ತಿಳಿಯದಂದದಿ ಕೇಳ್ವ |
ಯಾದರು ಪೇಳ್ವ ಪೋದವಳ ||
ಆದರಿಸದೆ ಯಜ್ಞಭಾಗವ ನಿನಗೀಯ |
ದಾದುದ ಕಂಡು ಸೈರಿಸದೆ || 79 ||
ಯೋಗಾಗ್ನಿಯಲಿ ಬೆಂದಳೊಡನೆ ಪೋದವರನ್ನು |
ಯಾಗಕ್ಕೆ ಭೃಗು ಹೋಮಿಸಿದನು ||
ನಾಗಭೂಷಣ ಇನಿತಾಯ್ತು ಸಂಗತಿಯೆಂದು |
ಯೋಗೀಂದ್ರನೆರಗಿ ಬೀಳ್ಕೊಟ್ಟ || 80 ||

**ಭೈರವಿ - ಏಕ**

ನಾರದನನು ಬೀಳ್ಕೊಟ್ಟು | ಮದ |
ನಾರಿಯ ಪ್ರಳಯದ ಸಿಟ್ಟು ||
ಘೋರ ಲಯಾಗ್ನಿಯ ತೆಗೆದ | ಜಗ |
ಮೂರನು ತಾ ಸುಡಬಗೆದ || 81 ||
ಹೂಂಕರಿಸುತ ತಾನೆದ್ದು | ಹೊಗೆ |
ಸಂಕುಲ ಕಿಡಿಗಳನುಗುಳ್ದು ||
ಶಂಕರ ನಾಲ್ದೆಸೆ ನೋಡಿ | ಭ |
ಯಂಕರ ರೂಪಿನೊಳಾಡಿ || 82 ||
ಕೆಂಡವೆ ಆಗಲಿ ಲೋಕ | ಬ್ರ |
ಹ್ಮಾಂಡಗಳುರಿಯಲನೇಕ ||
ಪುಂಡರೀಕಾಸನ ಸಹಿತ | ಸುರ |
ತಂಡವ ಸುಟ್ಟಪೆನೆನುತ || 83 ||
ಖಂಡಲ ಮುಖ್ಯಾಮರರು | ಸುರ |
ತಂಡವನೇಕಗಳವರು ||
ಕಂಡರೆ ನಮ್ಮಯ ಬಲುಹ | ಹಗೆ |
ಗೊಂಡಿರ ಬಗೆದರೆ ಅಹಹ || 84 ||
ಭಂಡನೆನುತ್ತೀ ಪರಿಯ | ನಡು |
ಮಂಡೆಯ ತುಡುಕುತ ಜಡೆಯ ||
ಕೊಂಡಪ್ಪಳಿಸಲು ಧರೆಗೆ | ಬ್ರ |
ಹ್ಮಾಂಡವು ನಡುಗಲು ಕಡೆಗೆ || 85 ||

**ಭಾಮಿನಿ**

ಅಟ್ಟಹಾಸದೊಳಭವನವನಿಯ |
ಲಿಟ್ಟಡಾ ಜಡೆಯಿಂದಿರದೆ ಜಗ |
ಜಟ್ಟಿ ಜನಿಸಿದನಾ ಮಹಾ ಕ್ರೋಧಾಗ್ನಿ ತನುಗೊಂಡು ||
ಹುಟ್ಟಿದಂತಿರೆ ವೀರಭದ್ರನು |
ಮೆಟ್ಟಿದಿಳೆ ಕುಸಿಯಲ್ಕೆ ದಿವಿಜರ |
ಬೆಟ್ಟ ಕೈಕಾಲುಗಳು ತಳೆದಂತಮರಚಯ ಬೆದರೆ || 86 ||

**ಮಾರವಿ - ಏಕ**

ಲಾಲಿಸು ವಿದುರ ವಿ | ಶಾಲ ತ್ರಿಣೇತ್ರ ಕ |
ರಾಳನಯನ ದಂ | ಷ್ಟ್ರಾಳಿಯ ಸಾವಿರ |
ತೋಳಿನೊಳಾಯುಧ | ಜಾಲ ಕಪಾಲದ |
ಮಾಲೆಯ ಬಹಳ | ಜ್ವಾಲೆಯ ಬೀರುತ | ನಿಂದನಾಗ || 87 ||
ಭಾರಿ ಶರೀರದ | ಭೂರಿ ವಿಭೂಷಣ |
ಘೋರ ಫಣೀಂದ್ರಾ | ಹಾರದ ಘನಘಂ |
ಟಾರವ ಝಣ ಝಣ | ತ್ಕಾರದೊಳಾ ಸುಕು |
ಮಾರನು ಪಾದಸ | ರೋರುಹಕೆರಗುತ | ನುಡಿದನಾಗ || 88 ||

**ಕೇದಾರಗೌಳ - ಅಷ್ಟ**

ತಾತ ಕೇಳಿಂದಿನೊಳೆನ್ನನು ಸೃಷ್ಟಿಸಿ |
ದೇತರ ಕಾರ್ಯಕಯ್ಯ ||
ಪ್ರೀತಿಯಿಂದಪ್ಪಣೆ ಪಾಲಿಸೆಂದೆರಗಲು |
ಜಾತನ ಪಿಡಿದೆಂದನು || 89 ||
ಬಾರೆನ್ನ ಮರಿಯಾನೆ ಬಾರೆನ್ನ ಕಣಿಯೆ ನೀ |
ಬಾರೊ ಬಾರಿಂದಿನಲಿ ||
ಕ್ರೂರ ಪಾಪಿಗಳೆಸಗಿದ ಅವಮಾನವ |
ಧೀರ ನೀ ಪರಿಹರಿಸು || 90 ||
ಕೊಲ್ಲು ಆ ದಕ್ಷನ ನಗುವಂಥ ಖೂಳರ |
ಹಲ್ಲುಗಳನೆ ಕಳಚು ||
ಖುಲ್ಲರು ಮಾಡುವ ಕ್ರತುವನ್ನು ಕೆಡಿಸುತ್ತ |
ನಿಲ್ಲದೆ ಬಾರೆಂದನು|| 91 ||
ಎಲ್ಲಿ ಆ ದಕ್ಷಗಿಕ್ಷಾದ್ಯರ ದಿಟಕೆ ನಾ |
ಬಲ್ಲೆನೆ ತ್ರೈಲೋಕ್ಯವು ||
ಹುಲ್ಲಿಗೆ ಸಮವಿದೇನ್ ದೊಡ್ಡಿತೆಂದೆರಗುತ |
ನಿಲ್ಲದೆ ಬೀಳ್ಕೊಂಡನು || 92 ||

**ಭಾಮಿನಿ**

ಜಡಿವ ಖಂಡೆಯ ಕರದೊಳಾ ಮೃಡ |
ನಡಿಗೆರಗಿ ತತ್ಪಾದರಜವನು |
ತೊಡೆದುಕೊಳುತಂಗದಲಿ ನೋಡೆಂದೆನುತ ಬೀಳ್ಕೊಂಡು ||
ಜಡಿವ ಘನನಿಸ್ಸಾಳಕೋಟಿಯ |
ಗಡಬಡೆಯ ಗಂಭೀರ ಭೇರಿಯ |
ನುಡಿವ ಘನವಾದ್ಯಗಳ ರವದಲಿ ವೀರ ಹೊರವಂಟ || 93 ||

**ಭೈರವಿ - ತ್ರಿವುಡೆ**

ಹೂಳಿದವು ಕಡಲೇಳು ಸುಭಟರ | ಕಾಲಧೂಳಿಯೊಳವನಿತಳ ಪಾ |
ತಾಳಕಿಳಿದವು ಕೈಯೊಳೆತ್ತಿದ | ಶೂಲನಿಕರವು ಚಂದ್ರಸೂರ್ಯರ |
ಮೇಲೆ ಹಾಯ್ದೀಪರಿಯಲೀಶನ | ಪಾಳೆಯವು ಬರುತಿರುವ ವಿಭವವ |
ಪೇಳನೇನದ್ಭುತವನಧ್ವರ | ಶಾಲೆಯಲಿ ಜನ ನಡುಗಿತದನಿ |
ನ್ನೇನನೆಂಬೆ | ಸಾಹಸ | ವೇನನೆಂಬೆ || 94 ||

ಹಲವು ತಲೆಗಳ ಹಲವು ಕಂಗಳ । ಹಲವು ಭುಜ ಪಾದಾನಖಂಗಳ ।
ಬಳಗ ಶಾಕಿನಿ ಡಾಕಿನೀಜನ । ಜಲಧಿ ನಡೆತರಲಿತ್ತ ವಿಬುಧರ ।
ಬಲ ಸಹಿತಲಮರೇಂದ್ರ ನಿಂತಾ । ಬಲುಭಟರ ತಡೆಯಲ್ಕೆ ಭರದಲಿ ।
ಕೊಳಗುಳದಿ ರಣರಂಗ ರಂಜಿಸಿ । ತಿಳೆಯೊಳಗೆ ಹೆಣ ರಾಶಿ ಬಿದ್ದುದು ।
ಏನನೆಂಬೆ । ಸಾಹಸ । ವೇನನೆಂಬೆ ॥ 95 ||

**ಪಂಚಾಗತಿ - ಮಟ್ಟೆ**

ಕೇಳು ವಿದುರ ಸುರರ ಸೈನ್ಯ । ಸೋಲವಾಗುತಿರಲು ಬಲು ವಿ ।
ಶಾಲ ಬಲ ಕುಬೇರ ಬಂದು । ಕೋಲಗರೆದನು ॥
ಶೂಲಪಾಣಿಯಣುಗನವನ । ಲೀಲೆಯಿಂದ ಕೆಡಹಲದರ ।
ಮೇಲೆ ಬಂದು ವರುಣ ಕಾದಿ । ಬೀಳುಗೊಂಡನು ॥ 96 ॥
ಅವನ ಹರಿಬಕೆಂದು ಬಂದು । ಪವನನತಿಪರಾಕ್ರಮದಲಿ ।
ಬವರ ಕೊಟ್ಟು ಬೀಳೆ ಕಂಡು । ಜವನು ಕೋಪಿಸಿ ॥
ತವಕದಿಂದ ನಿಂತು ಕಾದು । ತವನು ಬೀಳೆ ರಾಕ್ಷಸೇಂದ್ರ ।
ನಿವಹ ಸಹಿತ ನಿಋುತಿ ಬಂದು । ಬವರ ಕೊಟ್ಟನು ॥ 97 ॥
ಅಂದು ನಿಋುತಿ ರಣದಿ ಕಾದಿ । ಮುಂದುಗೆಡಲು ಪವನಮಿತ್ರ ।
ನಂದು ಹಳಿಚಿಪೋದ ಬಳಿಕ । ಚಂದ್ರಸೂರ್ಯರು ॥
ಮುಂದುವರಿದು ನವಗ್ರಹಂಗ । ಳೊಂದುಗೂಡಿ ಸೆಣಸಿ ಶಿವನ ।
ಕಂದನೊಡನೆ ಕಾದಿ ಸೋತ । ರೊಂದು ನಿಮಿಷದಿ ॥ 98 ||

**ಭಾಮಿನಿ**

ಏನನೆಂಬೆನು ವಿದುರ ಕೇಳ್ಳೈ ।
ಮಾನಿಕರಿಗಾದಪಜಯವ ಸುರ ।
ಸೇನೆ ರುಧಿರಾಂಬುಧಿಯೊಳದ್ದುದು ನಿಮಿಷಮಾತ್ರದಲಿ ॥
ಆ ನಿಖಿಲ ಸುರವರರು ಗಾಯದ ।
ಶೋಣಿತದೊಳುರುಳಲ್ಕೆ ಸುರಪತಿ ।
ತಾನೆ ಗರ್ಜಿಸುತೆಂದನಾ ವರ ವೀರಭದ್ರಂಗೆ ॥ 99 ||

**ಭೈರವಿ - ಅಷ್ಟ**

ಫಡ ಫಡ ಕೊಡು ಸಮರ । ಯಾಗವ ವ್ಯರ್ಥ ।
ಕೆಡಿಸಬಂದೆಮ್ಮವರ ॥
ಕೆಡಹಿದ ಗರ್ವದಿ ತಲೆಯನ್ನು ಕೊಡುವೆಯ ।
ಹುಡುಗ ಕೇಳೆನುತೆಚ್ಚನು ॥ 100 ॥
ಪಿತನ ಬಿಟ್ಟಿಂದು ಬಂದು । ನೀವೆಲ್ಲರು ।
ಕ್ರತುವಿನ ಭಾಗ ತಿಂದು ॥
ಅತಿಸೊಕ್ಕಿದುದಕೆ ಮದ್ದರೆವೆ ನೋಡೆನ್ನುತ್ತ ।
ಖತಿಯಿಂದ ತೆಗೆದೆಚ್ಚನು ॥ 101 ॥
ಧರೆಯೊಳಾಗುವ ಯಜ್ಞಕೆ । ತಾನಲ್ಲದ ।
ನ್ಯರು ಬಾಧ್ಯರ್ ಯಾರಿದಕೆ ॥
ಮರುಳೆ ನೀನೆಂತಿದನರಿವೆ ಪೋಗೆನುತ ಬೊ ।
ಬ್ಬಿರದೆಚ್ಚನಸ್ತ್ರಗಳ ॥ 102 ॥
ಈ ರೀತಿ ಕ್ರತುಗಳನು । ಉಂಬವರಿಕೊ ।
ಬೇರಿಹರೆಂಬುದನು ॥
ತೋರಿಪೆನೆನುತೆಚ್ಚು ಕರದ ಕಾರ್ಮುಕವನ್ನು ।
ವೀರನಿಕ್ಕಡಿಗೆಯ್ದನು ॥ 103 ॥

ವಜ್ರಾಯುಧವನು ಕೊಂಡು । ಹೊಯ್ವೆಡೆ ಕಂಡು ।
ಧೂರ್ಜಟಿ ರೋಷಗೊಂಡು ॥
ಗರ್ಜಿಸಿ ತುಳಿದ ಭರಕೆ ರುಧಿರವ ಕಾರಿ ।
ನಿರ್ಜರಾಧಿಪ ಬಿದ್ದನು ॥ 104 ||

**ಭಾಮಿನಿ**
ಕುಲಿಶವನು ಸೆಳೆಕೊಂಡು ಕೋಪದಿ ।
ತುಳಿದ ಭಾರಕೆ ರುಧಿರ ಕಾರುತ ।
ವಲವಿರೋಧಿಯು ಬೀಳೆ ಜನತತಿ ಹಾಯೆನುತ್ತಿರಲು ||
ಬಳಿಕ ಬಂದಾ ಯಜ್ಞ ಶಾಲೆಯ ।
ನಲಘುಮತಿಗಳು ಪೊಕ್ಕು ಮುನಿಸಂ ।
ಕುಲವ ಭಂಗಿಸಿ ಬಯ್ದು ಕಟ್ಟಿದರಖಿಲರಡಿಗಡಿಗೆ ॥ 105 ||

**ನಾದನಾಮಕ್ರಿಯೆ - ಅಷ್ಟ**
ಪ್ರಮಥರ ಕೊಂದು ಹೋಮಿಸಿ । ಇಕ್ಕೊ ।
ಕುಮತಿ ಈತನು ಕಣ್ಣ ತಿರುಗಿಸಿ ॥
ಅಮಮ ಈ ಭೃಗುವಿನ ಹಿಡಿರೆಂದು ।ಪೇಳ್ದ ।
ಕ್ರಮದಿ ಕಿತ್ತರು ಕಣ್ಣುಗಳ ಬಂದು ॥ 106 ॥
ನಕ್ಕನೀ ಭಗನೆಂಬ ಖೂಳನು । ಅತಿ ।
ಸೊಕ್ಕಿಹನೀತ ದುಶ್ಶೀಲನು ॥
ಇಕ್ಕೊ ಈತನ ಹಿಡಿರೆಂದರು ।ಮೂರ್ಖ ।
ರಾತನ ಹಲ್ಗಳ ತೆಗೆದರು ॥ 107 ॥
ಎಲೆಲೆ ಈ ಮುನಿಗಳ ಗಡ್ಡವ । ಆಗ ।
ಲಲುಗಿಸಿ ನಕ್ಕ ಜನೌಘವ ॥
ಎಳೆಯಿರೊ ಬಿಡದಿರೆಂದೆಳೆದರು । ಉರಿ ।
ಗೊಳಿಸಿ ಗಡ್ಡಗಳಿಗೆ ನಕ್ಕರು ॥ 108 ॥
ಕಂಡು ಗರ್ಜಿಪ ಮುನಿಕುಲಗಳ । ಹೋಮ ।
ಕುಂಡಕ್ಕೆ ದೂಡಿರೆಂದವರ್ಗಳ ॥
ಕಂಡಲ್ಲಿ ದ್ವಿಜರ ಭಂಗಿಸಿದರು । ಸವಿ ।
ದುಂಡು ಸಾಹಿತ್ಯವ ನಲಿದರು ॥ 109 ||

**ಭಾಮಿನಿ**
ಉಗುಳಿ ಬಾಯ್ದಂಬುಲವ ಮುನಿವ ।
ರ್ಗಗಳ ಹೊಯ್ವಟ್ಟುತಲಿ ಕುಂಡಕೆ ।
ವಿಗಡರುಚ್ಚನು ಹೊಯ್ದು ಕೆಡಿಸಿದರಾ ಮಹಾಧ್ವರವ ॥
ಬಗೆಬಗೆಯ ಪರಿಭವವ ಕಂಡ ।
ಕ್ಷಿಗಳೊಳಗೆ ಕಿಡಿಗೆದರಿ ಭೂತಾ ।
ದಿಗಳ ಹೊಯ್ವಟ್ಟುತಲಿ ಬಂದಾ ದಕ್ಷನಿದಿರಾದ ॥ 110 ||

**ದೇಶಿ - ಅಷ್ಟ**

ಏನಿದೇನಿದು ಕೌತುಕ ಯಜ್ಞವ |

ಹಾನಿಗೆಯ್ವೀ ಪರಿಯ ಮುನಿಗಳ |

ಮಾನಭಂಗವ ಮಾಳ್ಪುದು || 111 ||

ಹಂದೆ ನೀನೆಲೊ ಮುನಿಗಳ ಹೆದರಿಸಿ |

ಮಂದಮತಿ ಇದಿರಾಗೆನುತ ಶರ |

ವೃಂದದಿಂದಲಿ ಮುಸುಕಿದ || 112 ||

ಯಜ್ಞಭಾಗವ ನಮ್ಮಯ್ಯಗೀಯದೆ |

ದುರ್ಜನತ್ವದಿ ಮಾಳ್ಪ ಯಾಗವಿ |

ಸರ್ಜನೆಗೆ ನಾ ಬಂದೆನು || 113 ||

ಕಡಿದು ನಿನ್ನಯ ತಲೆಯ ಪೂರ್ಣಾಹುತಿ |

ಕೊಡುವೆನಗ್ನಿಗೆ ನೋಡೆನ್ನುತ್ತವ |

ನೊಡನೆ ತಾ ತೆಗೆದೆಚ್ಚನು || 114 ||

ಇಂತು ತಮ್ಮೊಳು ಮಾತಾಡುತೀರ್ವರು |

ನಿಂತು ಕಾದುವ ಭರಕೆ ಮೂಜಗ |

ಸಂತತಿಯು ನಡನಡುಗಿತು || 115 ||

ಬಿಟ್ಟು ಆಯುಧಗಳನವರೀರ್ವರು |

ಮುಷ್ಟಿಯುದ್ಧದಿ ಕಾದುತಿರೆ ಕಂ |

ಗೆಟ್ಟು ಜಗ ತಲ್ಲಣಿಸಲು || 116 ||

ಕೊಯ್ದು ಮುಂದಲೆ ಪಿಡಿದು ಆ ದಕ್ಷನ |

ಬೈದು ಕೆಡಹುತಲೆದೆಯ ಮೆಟ್ಟುತ |

ಕೊಯ್ದನಾತನ ಶಿರವನು || 117 ||

**ಭಾಮಿನಿ**

ದಕ್ಷಶಿರವನು ಕೊಯ್ದು ಕ್ರತುವಿಂ |
ಗಾ ಕ್ಷಣದೊಳಾಹುತಿಯ ಮಾಡುತ |
ರಕ್ಷಿಸುತ ಪ್ರಣತೌಘಕಭಯವ ತೋರಿ ಸಂತಸದಿ ||
ದಕ್ಷಮಖವಿಧ್ವಂಸಿ ಜಯ ಜಯ |
ರಕ್ಷಿಸೆಂದಮರೌಘ ನುತಿಸಲಿ |
ಕಾ ಕ್ಷಣವೆ ತೆರಳಿದನು ವರಕೈಲಾಸಪರ್ವತಕೆ || 118 ||

**ವಾರ್ಧಕ**

ವಿದುರ ಕೇಳಖಿಲ ಗಾಯದಲಿ ನುಗ್ಗಾಗಿ ವಿಧ |
ವಿಧದ ಮುನಿನಿಕರ ಸುರತತಿ ನವಗ್ರಹರಯ್ದಿ |
ಪದುಮಜನ ಮರೆಪೊಕ್ಕು ಪುರಹರನ ಭೀತಿಯೊಳ್ ಬೆದರಿ ನಾಲ್ದೆಸೆ ನೋಡುತ ||
ಪದಯುಗಳಕೆರಗಿ ಕಮಲಜನ ನುತಿಸಲ್ಕೆ ಕಂ |
ಡಧಿಕ ಚೋದ್ಯದಲಿ ವಿಸ್ಮಿತನಾಗುತೀ ಪರಿಯ |
ಕದನಮಾರಿಂದಾಯ್ತು ರುಧಿರಪ್ರವಾಹಮೇನೆಂದೆನುತ ಬೆಸಗೊಂಡನು || 119 ||

**ಸೌರಾಷ್ಟ್ರ - ಅಷ್ಟ**

ಏನಿದೇನೀ ಪರಿ ಶೋಣಿತ ಗಾಯವಿ |
ದೇನು ಪೇಳಿ | ಸುರ |
ಸೇನೆಗೆ ದನುಜರಟ್ಟುಳಿ ಘನವಾಯಿತೆ
ಏನು ಪೇಳಿ || 120 ||
ಈ ನಮ್ಮ ಸುರಪನ ದೇಹ ತಲ್ಲಣಿಸುವು |
ದೇನು ಪೇಳಿ | ಶಶಿ |
ಭಾನು ಮುಂತಾದ ದೇವರ್ಕಳು ನಡುಗುವು |
ದೇನು ಪೇಳಿ || 121 ||
ಭೃಗುಮುನೀಶ್ವರನ ದೃಷ್ಟಿಗಳನಾರೊಯ್ದರು |
ಏನು ಪೇಳಿ | ಮತ್ತೀ |
ಭಗಮುನಿದಾಯ ಹಲ್ಲುಗಳಿದೇನಾಯಿತು |
ಏನು ಪೇಳಿ || 122 ||
ಸೊಗಸಾಯ್ತು ಗುರುವಿನ ಗಡ್ಡವೇನುರಿದುದು |
ಏನು ಪೇಳಿ | ಇದು |
ನಗೆಗೇಡಾಯ್ತೆಂದೆನಲೆಂದನು ಸುರಪತಿ |
ಏನು ಪೇಳಿ || 123 ||

**ಬೇಗಡೆ - ತ್ರಿವುಡೆ**

ಅವಧರಿಸೆನ್ನ ಮಾತನು ಕೃಪಾಜಲಧಿ |
ವಿವರಿಪೆನಾದುದನಾ ದಕ್ಷಾಧ್ವರದಿ ||
ಶಿವನಿಗೆ ಕ್ರತುಭಾ | ಗವ ಕೊಡದುದ ಮ |
ತ್ತವನರಸಿಯು ಬರ | ಲವಳನು ಮನ್ನಿಸ |
ದಿವರಿರ್ದುದ ಕಂ | ಡವಳತಿ ಕೋಪದೊ |
ಳವಯವ ಬಿಸುಟಳು | ಪವನಸಖನಲಿ || 124 ||
ಆ ಮೇಲೆ ಕೋಪಿಸುತೀಶ ತನ್ನವರ |
ಪ್ರೇಮದಿ ಕಳುಹಲಯ್ತಂದು ನಮ್ಮವರ ||
ಸ್ತೋಮವ ಸದೆದು ಮ | ಹಾ ಮುನಿಗಳ ನಿ |
ಸ್ಸೀಮರ ಭಂಗಿಸಿ | ಹೋಮವ ಕೆಡಿಸುತ |
ಲಾ ಮಹದಕ್ಷಮ | ಹಾಮಹಿಮನ ಶಿರ |
ಹೋಮಿಸಿ ಹೋದರು | ಸ್ವಾಮಿ ಪರಾಕೆ || 125 ||
ವಿರಹಾಗ್ನಿಯಿಂದಾತ ಸುಡುವ ಮೂಜಗವ |
ಹರನ ಕೋಪವನಾನಲರಿಯದೀ ವ್ರಜವ ||
ಕರುಣದಿ ರಕ್ಷಿಪ | ಬಿರುದೊಡೆಯರಗಿದ |
ನಂತೀ ಕ್ಷಣದಲಿ | ತೆರಳಿ ಶಿವನನುಪ |
ಚರಿಸಿ ಖತಿಯ ಪರಿ | ಹರಿಸಿ ಮುಂದೆಮ್ಮನು |
ಇರುವಂತೆಸಗೈ | ಧೊರೆಯೆ ಪರಾಕು || 126 ||

**ಭಾಮಿನಿ**

ಕೇಳಿ ವಿಸ್ಮಿತನಾಗುತೆಲವೋ |
ಖೂಳರಿರ ನೀವ್ ಯಜ್ಞಭಾಗವ |
ನೀಲಕಂಧರಗೀಯದಖಿಲೇಶ್ವರಿಯ ಮನ್ನಿಸದೆ ||
ಹಾಳುಮಾಡಿದಿರಕಟ ಕಾರ್ಯವ |
ಪೇಳಬಂದಿರೆ ತನಗೆ ಕಡೆಗೊಂ |
ದೂಳಿಗವನೀಗೆನುತ ತಲೆದೂಗುತ್ತಲಿಂತೆಂದ || 127 ||

**ಸಾಂಗತ್ಯ - ರೂಪಕ**

ಆತನ ನಿಜವ ಸಾಕ್ಷಾತ್ ನಾರಾಯಣ |
ನಾತನು ಬಲ್ಲ ನಾ ಬಲ್ಲೆ ||
ಕೋತಿಗಳಿರ ನೀವೆಂತರಿವಿರಿ ಕೂಗುವ |
ರೀತಿಯ ಬಲ್ಲಿರೀ ತೆರದಿ || 128 ||
ಆದರೀ ಪರಿ ಬಂದು ಹೊರಳುವಿರಯ್ಯ ಲೇ |
ಸಾದುದು ಬಹೆನೇಳಿರೆನುತ ||
ಆ ದಿವ್ಯಋಷಿಗಳು ಸಿದ್ಧ ಸಾಧ್ಯರು ಸಹಿ |
ತಾದಿಮೂರುತಿ ಹೊರವಂಟ || 129 ||
ಬಂದು ಕೈಲಾಸಪರ್ವತದೋಳೀಶನ ಪಾದ |
ದ್ವಂದ್ವವ ಕಂಡೆರಗುತಲಿ ||
ಚಂದದಿಂದೊಡೆಯನೆಮ್ಮಪರಾಧಂಗಳ ಕ್ಷಮಿ |
ಸೆಂದು ಕೂಗಿದರೊಂದುಗೂಡಿ || 130 ||

**ವಾರ್ಧಕ**

ಪಾಲಿಸಖಿಲಾಧೀಶ ರವಿಕೋಟಿಸಂಕಾಶ |
ವ್ಯಾಳಕುಂಡಲಭೂಷ ತ್ರಿಣಯ ಶ್ರೀಗೌರೀಶ |
ನೀಲಕಂಧರ ಶಾಂತ ಸಕಲದುರಿತಧ್ವಾಂತ ತ್ರಿಪುರವಿಧ್ವಂಸ ಹಂಸ ||
ಕಾಲ ಕಾಲಸ್ವರೂಪ ಸಕಲವಿದ್ಯಕಲಾಪ |
ಫಾಲಲೋಚನ ಭರ್ಗ ಭಕ್ತಜನಸಂಸರ್ಗ |
ಶೂಲಧರ ಹರಿಮಿತ್ರ ಸಕಲಪುಣ್ಯಚರಿತ್ರ ಜಯ ನಮೋ ಜಯತೆಂದರು || 131 ||

**ಭಾಮಿನಿ**

ಸುರರು ಸಹಿತಂಬುರುಹಭವ ಪರಿ |
ಪರಿಯ ಸಂಸ್ತುತಿಮಾಡಲದ ತಾ |
ನರಿತು ಮುನಿಗಳ ಸಹಿತಿದಿರ್ಗೊಂಡಭವನುಪಚರಿಸೆ ||
ಎರಗಲೀಸದೆ ಪರಮ ಶಿವನನು |
ವರ ಚತುರ್ಮುಖನಪ್ಪಿ ನಿಜ ವಿ |
ಷ್ಟರದೊಳೀರ್ವರು ಕುಳಿತ ಬಳಿಕಿಂತೆಂದನಜ ನಗುತ || 132 ||

**ಕಾಂಭೋದಿ - ಝಂಪೆ**

ಸಿಟ್ಟಿದೇನೆಮ್ಮೊಡನೆ ಸೃಷ್ಟಿಸ್ಥಿತಿಲಯಗಳಿಗೆ |
ಶ್ರೇಷ್ಠ ನೀನಯ್ಯ ನಿಂದಿಸುತ ||
ಕೆಟ್ಟನರಕದೊಳಾಳ್ವ ದುಷ್ಟಾತ್ಮ ಜನರ ಕೈ |
ಗೊಟ್ಟು ನೀ ಸಲಹೆನಲುಸಿರ್ದ || 133 ||

ಬಂದ ಕಾರ್ಯವನರಿತೆ ನಿಂದಿಸಿದ ಜನರಿಂಗೆ |
ಸಂದುದೈ ತಕ್ಕ ಶಿಕ್ಷೆಗಳು ||
ಮುಂದಿನ್ನು ಪೇಳಿ ಫಲವೇನು ಬಿಜಯಂಗೆಯ್ಯು
ದೆಂದೆನಲು ಕಮಲಜನುಸಿರ್ದ || 134 ||
ಆದಿಯಲಿ ದಕ್ಷ ಮೊದಲಾದವರ ಸೃಷ್ಟಿಸಿದೆ |
ಆ ದಿವ್ಯ ಕೃತುವ ನಿರ್ಮಿಸಿದೆ ||
ಕ್ರೋಧದಿಂದವನು ಕೆಡಿಸಿದೆ ಕೊಂದೆ ಮುನಿಯಲಾ |
ರಾದರಿನ್ನುಂಟೆ ಕಾವವರು || 135 ||
ಮಾಡಿದಪರಾಧಗಳ ಮಾಪುಗೆಯ್ದೆಮ್ಮೊಡನೆ |
ಕೂಡಿ ಬಂದ್ಯಜ್ಞಗಳ ನಡೆಸಿ ||
ನೋಡಿ ನಮ್ಮನು ಮಡಿದ ಜನರನೆಬ್ಬಿಸಿ ಕೃಪೆಯ |
ಮಾಡೆನುತಲಜ ಬೇಡಿಕೊಂಡ || 136 ||

**ಭಾಮಿನಿ**

ಸರಸಿಜಾಸನ ಬೇಡಿಕೊಳಲತಿ |
ಕರುಣರಸ ತುಳುಕಾಡಲಖಿಳೇ |
ಶ್ವರನು ಪಾಲಿಸುತಭಯವನು ನೀವಂಜಬೇಡೆನುತ ||
ವರ ಕೃತುವನುದ್ಧರಿಸಿ ದಕ್ಷಾ |
ದ್ಯರನು ಜೀವಿಸಿಕೊಡುವೆನೆನಲೀ |
ಶ್ವರನ ಕೃಪೆಗತಿ ಪರಿಣಮಿಸಿ ನಲಿದಾಡಿತಖಿಳ ಜನ || 137 ||

**ಕೇದಾರಗೌಳ - ಅಷ್ಟ**

ಆಗಲೆ ಪರ ಕಮಲಜರು ಮುಂತಾಗಿಯೆ |
ಯಾಗಮಂದಿರವ ಪೊಕ್ಕು ||
ಯೋಗಸಾಮರ್ಥ್ಯದೊಳಳಿದ ಜನೌಘವ |
ಬೇಗದಿಂದೆಬ್ಬಿಸುತ || 138 ||
ಆಡಿನ ಶಿರವನ್ನು ಜೋಡಿಸಿ ದಕ್ಷನ |
ಗಾಢದಿಂದೆಬ್ಬಿಸಲು ||
ಕೂಡಿ ಸಮಸ್ತ ದೇವರ್ಕಳು ಋಷಿಗಳು |
ಮಾಡಿದರ್ ಯಜ್ಞಗಳ || 139 ||
ತೋರಿತಾ ವೇಳ್ಯದಿ ಕೋಟಿ ದಿವಾಕರ |
ಭೂರಿಪ್ರಕಾಶದಲಿ ||
ಚಾರು ಕುಂಡಲ ಹಾರ ಪದಕದಿ ಮೆರೆವಾದಿ |
ನಾರಾಯಣನ ಮೂರ್ತಿಯು || 140 ||
ಉಟ್ಟ ಪಿತಾಂಬರದುಡುಗೆ ಚತುರ್ಭುಜ |
ತೊಟ್ಟ ಸರ್ವಾಭರಣ ||
ದೃಷ್ಟಿ ಕೋರೈಸಲೀಕ್ಷಿಸಿ ಸುರರೆಲ್ಲ |
ರೊಟ್ಟಾಗಿ ನುತಿಗೆಯ್ದರು || 141 ||

**ವಾರ್ಧಕ**
ಜಯ ಜಯ ರಮಾಲೋಲ ಭಕ್ತಜನಪರಿಪಾಲ |
ಜಯತು ಜಗದಾಧಾರ ಕೌಸ್ತುಭಾಲಂಕಾರ |
ಜಯ ಜಯ ಸುರಾಧ್ಯಕ್ಷ ದುಷ್ಟದಾನವಶಿಕ್ಷ ಜಯ ಕೈಟಭಾರಿ ಜಯತು ||
ಜಯ ಜಯ ಜಗದ್ಭರಿತ ಲೋಕಪಾವನಚರಿತ |
ಜಯತು ಪಾವನಚರಣ ಚಾರು ಸಕಲಾಭರಣ |
ಜಯ ಕೋಟಿರವಿಭಾಸ ಸಕಲಕೀರ್ತಿವಿಲಾಸ ಜಯತೆಂದು ನುತಿಗೆಯ್ದರು || 142 ||

**ಭಾಮಿನಿ**
ಎರಗಲಭವನ ಮೌಳಿಯನು ಸಿರಿ |
ಯರಸನೆತ್ತಿದನಪ್ಪಿದನು ಪಂ |
ಕರುಹ ಭವನನು ನುಡಿಸಿ ಮನ್ನಿಸಿದನು ಸುರೇಶ್ವರನ||
ಉರುವ ದೈವದ ನೆಲೆಯನರಿವರೆ |
ಕುರುಬರಿವದಿರು ಸಾಕಿದೇತಕೆ |
ಮರೆದು ಕಳೆ ಮೂಢಾತ್ಮರವಗುಣವೆಂದು ಹರಿ ನುಡಿದ || 143 ||

**ಮಧ್ಯಮಾವತಿ - ತ್ರಿವುಡೆ**
ಎನಲಭವನಿಂತೆಂದ ತವ ಪದ |
ವನಜದಾಸನು ನಾನು ಬಗೆವನೆ |
ಬಣಗು ಸಾಧಕರಿವರೊಳಾದವ |
ಗುಣನೆಲ್ಲವ ಮರೆತೆನು | ಹರಿಯೆ ಕೇಳು || 144 ||
ದಕ್ಷಗುಸಿರಿದನಿಬ್ಬರೊಳು ನೀ |
ಪಕ್ಷಪಾತವದೇಕೆ ಭೇದವ |
ನೀಕ್ಷಿಸಿದ ಜನರಾಳ್ವರತಿಶಯ |
ದಕ್ಷಯದ ನರಕಾಬ್ಧಿಯ | ಕೇಳಿರೆಲ್ಲ || 145 ||
ಹರನ ನಿಂದಿಸಿ ತನಗೆ ಮಾಳ್ಪ |
ಧ್ವರ ಸಮಗ್ರವನೊಲ್ಲೆನೆನಗೀ |
ಸುರರು ಅಂಗೋಪಾಂಗವೆಂಬುದ |
ನರಿತು ಪೂಜಿಪುದೆಲ್ಲರು | ಇನ್ನು ಮುಂದೆ || 146 ||
ಗಿರಿವರನ ಸುತೆಯಾಗಿ ಪರಮೇ |
ಶ್ವರನ ಸೇರುವಳುಮೆ ವಿವಾಹದಿ |
ಹರುಷ ಕೈಗೂಡುವುದು ನಿಮಗೆನೆ |
ಸುರರು ಜಯ ಜಯವೆಂದರು | ಭಕ್ತಿಯಿಂದ || 147 ||
ಮಗಳ ಮರಣವ ನೆನೆನೆನೆದು ಮ |
ತ್ತೊಗುವ ಕಂಬನಿಯಿಂದ ದಕ್ಷನು |
ಬಗೆಬಗೆಯ ಸಂಸ್ತುತಿಸಿ ಹರನಡಿ |
ಯುಗಳಕೆರಗಿದು ನುತಿಸಿದ | ಚಿಂತೆಗೊಂಡು || 148 ||
ಅದ್ವಯನ ಪೂಜಿಸುತ ಮತ್ತಾ |
ರುದ್ರಭಾಗವನೀಯುತಜ ದಿವಿ |
ಜಾದ್ಯರನು ಮನ್ನಿಸುತ ಮಾಡಿದ |
ನಧ್ವರವ ಸಂಪೂರ್ಣದಿ | ದಕ್ಷನಂದು || 149 ||

**ಭಾಮಿನಿ**
ತೋರಿತಾ ಮುಖವಹಿವಿರೋಧಿಯ |
ನೇರಿ ಹರಿ ಗಮಿಸಲ್ಕೆ ಸರ್ವರು |
ಸಾರಿದರು ತಂತಮ್ಮ ನಗರಕೆ ಹರಿದುದಾಸ್ಥಾನ ||
ಗೌರಿ ವರಗಿರಿರಾಜನರಸಿಯ |
ಚಾರು ಗರ್ಭದೊಳವತರಿಸಿ ಮದ |
ನಾರಿಯನು ಸಾರಿದಳು ವೈವಾಹಿಕಮಹೋತ್ಸವದಿ || 150 ||

**ಮೊದನೆಯ ಸಂಧಿ ಮುಗಿದುದು**
---------------------------------------------

**ಎರಡನೆಯ ಸಂಧಿ**
**ವಾರ್ಧಕ**
ಎನೆ ಕೇಳ್ದು ಗಿರಿಜಾಸ್ವಯಂವರವ ವಿಸ್ತರಿಸಿ |
ತನಗೊರೆವುದೆಂದು ಬೆಸಗೊಳಲೆಂದನಾ ಜಗ |
ಜ್ಜನನಿ ಪಿತೃದ್ವೇಷದಲಿ ಹತವಾದ ಪತಿಯ ಹಂಬಲಿಸುತ್ತ ಗಿರಿರಾಜನ ||
ವನಿತೆ ಮೇನಕೆ ಗರ್ಭದಲಿ ವಾಸವಾಗಲ್ಕೆ |
ಮನದೊಳುಬ್ಬುತಲಿ ಧರಣೀಧರಂ ಮುಂದಾಗು |
ವನುಪಮದ ಕಾರ್ಯಕಾಲೋಚಿಸುತ ಮಂತ್ರಿ ಪ್ರಸಿದ್ಧನೊಡನಿಂತೆಂದನು || 151 ||

**ಭೈರವಿ - ಝಂಪೆ**
ಕೇಳಯ್ಯ ಮಂತ್ರಿಯತಿ | ಲೀಲೆಯಲಿ ಗರ್ಭವನು |
ತಾಳಿಹಳು ಎನ್ನರಸಿ | ಶ್ರೀಲೋಲದಯದಿ || 152 ||
ವರಪುರೋಹಿತರುಗಳ | ಬರಿಸೀಗ ಸೀಮಂತ |
ಕಿರಿಸು ಲಗ್ನವ ಬೇಗ | ಪುರವ ಶೃಂಗರಿಸು || 153 ||
ತರಿಸು ಸಾಹಿತ್ಯಗಳ | ಬರಿಸು ಭೂಪಾಲಕರ |
ತ್ವರಿತದಿಂದೆನೆ ಮಂತ್ರಿ | ಕರೆಸಿ ಜೋಯಿಸರ || 154 ||
ತಿಳಿದು ಲಗ್ನವ ರಾಜ | ನಿಲಯ ಶೃಂಗರಿಸೆ ನೃಪ |
ಕುಲವ ಕರೆಸಲ್ಕೆ ದ್ವಿಜ | ಬಲವಯ್ದಿತೊಡನೆ || 155 ||
ನೋಡಿ ಸುಮುಹೂರ್ತದಲಿ | ರೂಢಿಯಮರರ ಮಂತ್ರ |
ಗಾಢಘೋಷಧಿ ಸುಮವ | ಕೂಡೆ ಮುಡಿಸಿದರು || 156 ||
ಭೇರಿ ತಂಬಟೆ ವಾದ್ಯ | ಭೂರಿ ರಭಸಗಳಿಂದ |
ನಾರಿಯರು ಬೆಳಗಿದರು | ಆರತಿಯ ಬೇಗ || 157 ||

**ದ್ವಿಪದಿ**
ಉತ್ತರೋತ್ತರ ಪುಂಸವನದಿ ಭೂಬುಧರ |
ಭುಕ್ತ ದ್ರವ್ಯದಲಿ ಸಂತುಷ್ಟಿಸಿದನವರ || 158 ||
ಮೊತ್ತಕೆರಗುತ ಬೀಳುಗೊಟ್ಟೊಡನೆ ದ್ವಿಜರ |
ಗೋತ್ರಪತಿಯಿರಲಿತ್ತ ಲಾಲಿಸೈ ವಿದುರ || 159 ||

**ಸಾಂಗತ್ಯ - ರೂಪಕ**
ಬಳಿಕ ನಾನೇನೆಂಬೆ ಲಲನೆ ಮೇನಕೆಗರ್ಭ |
ಹೊಳೆದುದು ದೀಪದಂದದಲಿ ||
ಕಲಶಕುಚಾಗ್ರ ಕಪ್ಪಾದುದು ಮುಖಪದ್ಮ |
ಥಳಥಳಿಸುತ್ತ ಕಾಣಿಸಿತು || 160 ||

ಯುವತಿಯು ಬೇಡಿದ ಬಯಕೆಯ ಸಲಿಸುತ್ತ |
ಲವನೀಶ ಹರುಷಗೊಂಡಿರಲು ||
ನವಮಾಸ ತುಂಬಲು ತರುಣಿ ಮಂಚವ ಸಾರಿ |
ಶಿವನೇ ಕಾಪಾಡೆಂದಳಬಲೆ || 161 ||

**ವಾರ್ಧಕ**
ಸತಿಗೆ ನವಮಾಸ ಸಂಪೂರ್ಣವಾಗಲ್ಕೆ ಸುರ |
ನುತೆ ಜಗನ್ಮಾತೆಯಂ ಪಡೆದಳಿನ್ನೇನೆಂಬೆ |
ನತಿಶಯವ ಪುಷ್ಪವೃಷ್ಟಿಗಳೆಸೆದು ದೇವದುಂದುಭಿ ಮೊಳಕಿತಾಕ್ಷಣದಿ ||
ಅತಿ ಹಿಗ್ಗುತಧಿಕ ಸಂತಸದಿ ಧರಣೀಧರಂ |
ಸುತೆ ಜನನಮಾದ ಲಗ್ನವ ತಿಳಿಯಬೇಕೆಂದು |
ಹಿತದಿಂದ ಜೋಯಿಸರ ಕರೆಸಿ ಬೆಸಗೊಳಲೆಂದರೊಡನೆ ಲಗ್ನವ ಗುಣಿಸುತ || 162 ||

**ತೋಡಿ - ಅಷ್ಟ**
ಕೇಳಯ್ಯ | ಭೂಪ | ಕೇಳಯ್ಯ || ಪ ||
ಕೇಳಯ್ಯ ಭೂಪಾಲ ನಾವೆಂಬ ನುಡಿಯ |
ಬಾಲೆಯ ಜನನದ ಫಲದ ಸಂಗತಿಯ || ಕೇಳಯ್ಯ || ಪ ||
ಲೇಸಾಗಿ ಲಗ್ನವ ಗುಣಿಸಿದೆವಯ್ಯ |
ಈಸು ಕೌತುಕ ಲಗ್ನ ಕಾಣಲಿಲ್ಲಯ್ಯ ||
ಲೇಸು ನಿನ್ನಯ ಭಾಗ್ಯಕೆಣೆಯಿಲ್ಲವಯ್ಯ |
ಈಶ ನಮ್ಮೆಲ್ಲರ ಸಲಹುವನಯ್ಯ || ಕೇಳಯ್ಯ || 163 ||
ಲಕ್ಷಣ ಪಾದದಿ ಪದ್ಮರೇಖೆಗಳು |
ಲಕ್ಷ್ಮೀಶಭಗಿನಿಯೆಂದೆನಿಸಿ ತೋರುವಳು ||
ಆಶ್ಚರ್ಯ ಕಾಣುವುದಿನ್ನೊಂದು ಕೇಳು |
ಸಾಕ್ಷಾತು ಶಿವನ ಕೈಪಿಡಿದು ಬಾಳುವಳು || ಕೇಳಯ್ಯ || 164 ||

**ಭೈರವಿ - ಝಂಪೆ**
ಜೋಯಿಸರ ನುಡಿ ಕೇಳಿ | ರಾಯ ಸಂತಸ ತಾಳಿ |
ಪ್ರೀಯದಿಂ ಪೇಳ್ದ ದ್ವಿಜ | ರಾಯನೊಡನಂದು || 165 ||
ಹನ್ನೊಂದನೆಯ ದಿನದಿ | ಪುಣ್ಯಾಹವನು ಮಾಡಿ |
ಕನ್ನಿಕೆಗೆ ಪೆಸರಿಟ್ಟ | ರುನ್ನತೋತ್ಸವದಿ || 166 ||
ಪರ್ವತನ ಸುತೆಯಾದ | ಕಾರಣದೊಳೀ ಸುತೆಗೆ |
ಪಾರ್ವತಿಯೆನುತ್ತೊರೆದ | ಪಾರ್ವರನುಮತದಿ || 167 ||
ಮನ್ನಿಸುತ ಕಳುಹಲ್ಕೆ | ರನ್ನತೊಟ್ಟಿಲೊಳಿಟ್ಟು |
ಕನ್ಯೆಯನು ತೂಗಿದರು | ಸನ್ನುತಿಸಿ ಪಾಡಿ || 168 ||

**ಮಧ್ಯಮಾವತಿ - ಅಷ್ಟ**
ಜೋ ಜೋ ಗಿರಿಕುಲಾಧಿಪಸುಕುಮಾರಿ |
ಜೋ ಜೋ ಪ್ರಣತಜನೌಘ ಉದ್ಧಾರಿ ||
ಜೋ ಜೋ ಸದ್ಗುಣಭರಿತೆ ಸಾಕಾರಿ |
ಜೋ ಜೋ ಪಾವನಚರಿತೆ ಶೃಂಗಾರಿ || ಜೋ ಜೋ || 169 ||

ಅಂಬುಜಭವಸುರವಂದಿತೆ ಜೋ ಜೋ |

ಶುಂಭನಿಶುಂಭಸಂಹಾರಿಣಿ ಜೋ ಜೋ ||

ಕಂಬುಕಂಧರೆ ಕಮಲಾಂಬಕಿ ಜೋ ಜೋ |

ಶಂಭುವಿನರಸಿ ಸದಾಶಿವೆ ಜೋ ಜೋ || ಜೋ ಜೋ || 170 ||

ಶ್ರೀಕೃಷ್ಣಭಗಿನಿ ಸರ್ವೋತ್ತಮೆ ಜೋ ಜೋ |

ಲೋಕೇಶ್ವರಿ ನಿತ್ಯಮಂಗಲೆ ಜೋ ಜೋ ||

ಶೋಕಭಯಾಘವಿನಾಶಿನಿ ಜೋ ಜೋ |

ನೀ ಕರುಣದಿ ಪೊರೆಯನುದಿನ ಜೋ ಜೋ || ಜೋ ಜೋ || 171 ||

**ಭಾಮಿನಿ**

ಇಂತು ತೂಗುತ ಪಾಡಿದಬಲಾ |
ಸಂತತಿಯ ಮನ್ನಿಸುತ ಮೇನಕೆ |
ಸಂತಸದಿ ಕಳುಹಲ್ಕೆ ಬಳಿಕಾ ಕುವರಿ ದಿನದಿನದಿ ||
ಕಾಂತೆ ಬೆಳೆದಳು ಪೌರ್ಣಮಿಯ ಶಶಿ |
ಯಂತೆ ಶೋಭಿಸಿ ನೋಳ್ಪ ಜನಕೆ ಮ |
ಹಾಂತ ಕೌತುಕವಾಗಿ ಮೆರೆದಳದೇನನುಸಿರುವೆನು || 172 ||

**ಮಾರವಿ - ಏಕ**

ನೊಸಲ ತಿಲಕ ಹುಬ್ಬೆಸಳುನಯನ ತನು |

ಹೊಸ ಜವ್ವನಸಿರಿಯ ||

ಶಶಿವದನದ ಸೂರ್ಯನ ಕಾಂತಿಯ ತನು |

ಪಸರಿಸೆ ನಾಲ್ದೆಸೆಗೆ || 173 ||

ಪ್ರಜ್ವಲಿಪಾಭರಣದ ಕಾಲುಂಗುರ |

ಗೆಜ್ಜೆಯು ಘಲಿರೆನುತ ||

ಹೆಜ್ಜೆಯಿಡುತ ಸಭೆಗಯ್ತಂದಯ್ಯಗೆ |

ಲಜ್ಜೆಯೊಳೆರಗಿದಳು || 174 ||

ಮಗಳ ನಿರೀಕ್ಷಿಸಿ ಬೆಗಡಗೊಳುತ ನೃಪ |

ತೆಗೆದಪ್ಪುತ ನಗುತ ||

ಮುಗುದೆಯ ತೊಡೆಯಲಿ ಕುಳ್ಳಿರಿಸುತ ಮಂ |

ತ್ರಿಗೆ ತಾನಿಂತೆಂದ || 175 ||

**ಭಾಮಿನಿ**

ಭರಿತವಾಯಿತು ಪ್ರಾಯವೀ ಸುಂ |
ದರಿಯ ರೂಪಿನ ತಕ್ಕ ಚೆಲುವಿನ |
ವರನದಾರೋ ಶಿವ ಶಿವಾ ವಿಧಿ ಬರೆದ ಸಂಗತಿಯ ||
ಪರಿಯನರಿಯಲಸಾಧ್ಯವೆನ್ನುತ |
ಧರಣಿಪತಿ ಚಿಂತಿಸಲು ಮರುಗದಿ |
ರರಸ ವೈವಾಹಿಕಕೆ ಭೂಮೀಶ್ವರರ ಬರಿಸೆಂದ || 176 ||

**ಸೌರಾಷ್ಟ್ರ - ತ್ರಿವುಡೆ**
ಕರದಿ ಮಾಲೆಯ ಕೊಟ್ಟು ಧರಣೀ |
ಶ್ವರರ ತೋರಿಸು ಮನಕೆ ಬಂದರ |
ವರಿಸಿಕೊಳಲೆಂದೆನುತ ಮಂತ್ರಿಪ | ನೊರೆಯೆ ಕೇಳಿ || 177 ||
ಲೇಸೆನುತ ನೃಪನಿರಲು ಬಳಿಕಾ |
ಕಾಶದಿಂ ಹೊಳೆಹೊಳೆದು ನಾರದ |
ನಾ ಸಮಯದಲಿ ಬಂದನಧಿಕ ವಿ | ಲಾಸದಿಂದ || 178 ||
ಆದಿನಾರಾಯಣನ ನೆನೆವುತ |
ಲಾ ದಯಾನಿಧಿ ಬರಲು ಸಭೆ ಸಹಿ |
ತಾದರದೊಳಿದಿರ್ಗೊಂಡು ಕರೆತಂ | ದಾದರಿಸುತ || 179 ||
ಚರಣಪೂಜೆಯ ಗೆಯ್ದು ವಂದಿಸೆ |
ಗಿರಿಜೆ ಮೈಯಿಕ್ಕಲ್ಕೆ ಮುನಿಪತಿ |
ಹರನ ವಧುವಾಗೆನುತ ಹರುಷದಿ | ಹರಸಿ ಬಳಿಕ || 180 ||
ಗಿರಿವರನ ಕರೆದೆಂದ ಲೋಕದಿ |
ಸರಿಯದಾರ್ರೈ ನಿನಗೆ ಕೇಳೈ |
ಹರನ ಸತಿ ಮಗಳಾದಳಿನಿತಾಶ್ಚರಿಯವೈಸೆ || 181 ||

**ವಾರ್ಧಕ**
ಹಿಂದೆ ದಕ್ಷನ ಮಗಳು ರುದ್ರಭಾಗವ ಕೊಡದೆ |
ಮಂದಮತಿಯಿವಳ ಮನ್ನಿಸದಾದ ಕಾರಣದಿ |
ನೊಂದು ಹತಮಾಗಿಯೆರಡನೆ ನಿನ್ನ ಜಠರದೊಳ್ ಬಂದಳಿವಳರಸನಾದ ||
ಇಂದುಶೇಖರನು ವೈರಾಗ್ಯದೊಳ್ ತಪಗೆಯ್ವ |
ನಿಂದಿವಳ ತಪಕೆ ಕಳುಹಲ್ಕೆ ಪರಮೇಶ್ವರಂ |
ಚಂದದಿಂದೊಲಿವನಿದನರಿತುಕೊಳ್ಳೆಂದೆನುತ ನಿಂದನಂತರ್ಧಾನದಿ || 182 ||

**ಕಂದ**
ಗೀರ್ವಾಣರ ಋಷಿವಚನದಿ |
ಪೂರ್ವಸ್ಮರಣೆಗಳ ತಿಳಿದು ನಿಶ್ಚಲ ಮನದಿಂ ||
ಪಾರ್ವತಿ ಕೊರ್ಗುತ ಚಿಂತಿಸಿ |
ಶರ್ವನ ನೆನೆನೆನೆದು ಮರುಗಿದಳು ಗೋಳಿಡುತಂ || 183 ||

**ಸಾಂಗತ್ಯ - ರೂಪಕ**
ಹರ ಹರಾ ಬಂದು ನೀನೆನ್ನ ವೈವಾಹದಿ |
ಕರವಿಡಿದಾದರಿಸಕಟ ||
ಕರಗದೆ ಮನಸು ನಿನ್ನರಸಿಯಲ್ಲವೇ ಸ್ವಾಮಿ |
ಚರಣಸೇವೆಯ ಪಾಲಿಸೆನಗೆ || 184 ||
ಅನ್ಯಾಯಗಾರ್ತಿ ನಾನಾದರೂ ಪರಮ ಕೃ |
ಪಾರ್ಣವನಯ್ಸೆ ನೀನಿಂದು ||
ಸನ್ನುತ ಜನರನು ಪೊರೆವನೆ ಬಂದೆನ್ನ |
ಮನ್ನಿಸಿ ಸಲಹೆಂದಳಬಲೆ || 185 ||
ಅಗಲಿ ನಿನ್ನಂಘ್ರಿಪಂಕಜವನಂದಿಂದಿಗು |
ಬಗೆ ಬಗೆ ಭವಣೆ ತಾಳಿದೆನು ||
ತೆಗೆದುಕೊಳ್ಳೆನ್ನನಿನ್ನಾದರು ಕೃಪೆಯೊಳೆಂ |
ದಗಜೆ ಗೋಳಿಟ್ಟು ಕೂಗಿದಳು || 186 ||

**ಬಿಲಹರಿ - ಏಕ**

ಆ ಸಮಯದಿ ಬಂದು ಜನನಿ ಸಂತಯ್ಸಿದ ।
ಳೀಶನ ಬರಿಸಿ ವೈವಾಹವನೆಸಗಿ ॥
ಲೇಸಾಗಿ ಕಳುಹುವೆನಳಲದಿರೆನುತ ಸಂ ।
ತಯ್ಸಲು ಕೇಳದಿರಲು ಗಿರಿವರನು ॥ 187 ॥
ಕೇಳಿ ಬಂದಾಗ ಸಂತಯ್ಸಿದನೀಶಂಗೆ ।
ಓಲೆಯ ಬರೆಸಿ ವೈವಾಹವನೆಸಗಿ ॥
ಲೀಲೆಯೊಳ್ ಕಳುಹುವೆ ಬಳಲದಿರೆಂದೆನೆ ।
ಕೇಳದಾಹಾರವ ವರ್ಜಿಸಿ ಸತಿಯು ॥ 188 ॥
ಇರೆ ಕಂಡು ದಂಪತಿಗಳು ಮನಮರುಗುತ್ತ ।
ತರಳರಿಲ್ಲದೆ ಬಲು ಶೋಕದೊಳಿರಲು ॥
ತರಳೆ ಪುಟ್ಟಿದಳೆಂದು ಹರುಷ ತಾಳ್ದುದಕಿಂದು ।
ಹರ ಹರ ವಿಧಿಯಿಂತು ಬರೆದನೆ ಎನುತ ॥ 189 ॥
ಕಣ್ಣನೀರಲಿ ಸುರಮುನಿಪನ ವಚನದಿ ।
ಕನ್ಯೆಯ ಕಳುಹಿದರಾ ತಪೋವನಕೆ ॥
ಉನ್ನತಭಕ್ತಿಯೊಳಾಕೆಯು ಮನದಿ ಮು ।
ಕ್ಕಣ್ಣನ ಭಜಿಸಿದಳಾ ತಪೋವನದಿ ॥ 190 ॥

**ಕಂದ**

ಇತ್ತಲು ದಿತಿಜಾತ್ಮಜನಸು ।
ರೋತ್ತಮ ತಾರಕನು ವಿಭವದಿಂದೋಲಗದೊಳ್ ॥
ದೈತ್ಯರ ಮೊತ್ತವ ನೋಡುತ ।
ಬಿತ್ತರಿಸಿದನಂದು ಮುದದಿ ಗಂಭೀರದೊಳಂ ॥ 191 ॥

**ಮಧ್ಯಮಾವತಿ - ಏಕ**

ಕೇಳ್ವಿರೆ ನೀವ್ ಕಿವಿಗೊಟ್ಟಿದನೆಲ್ಲ ।
ತಾಳ್ದು ನಾವಿರುವುದಿದನುಚಿತವಲ್ಲ ॥ ಕೇಳ್ವಿರೆ ॥ ಪ ॥
ಜ್ಯೇಷ್ಠರು ನಾವಾಗಿ ದಿವಿಜಲೋಕವನು ಕ ।
ನಿಷ್ಠರಾಳ್ವರು ನಾವಿದ್ದೇನು ಫಲ ॥
ತಟ್ಟನೆ ಸುರರನು ಒಡೆದು ಸ್ವರ್ಗವನಾಳ್ವ ।
ದಿಟ್ಟರಿದ್ದರೆ ಏಳಿರೆನಲೆಂದ ಶಂಬರ ॥ ಕೇಳ್ವಿರೆ ॥ 192 ॥
ಗೆಲಬಹುದಾದರು ತಕ್ಕುಪಾಯದಿ ನಮ್ಮ ।
ಗೆಲುವನು ಕಪ್ಪುಮೈಯಾತ ಬಂದು ॥
ಗೆಲುವಿನೊಳಜನೊಳು ವರವ ಸಂಪಾದಿಸಿ ।
ಗೆಲಬೇಕೆಂದೆನಲದಕೊಪ್ಪಿದ ದಾನವ ॥ ಕೇಳ್ವಿರೆ ॥ 193 ॥

**ವಾರ್ಧಕ**

ಬಂದಾಗ ತಾರಕಂ ಮಿಂದಗ್ನಿಕುಂಡದೊಳ್ ।
ಚಂದದಿಂ ತಲೆಯೂರಿ ನಿಂದಜನ ನೆನೆದು ಹರಿ ।
ನಂದನನೆ ಭಕ್ತಜನಬಂಧು ವರ ಕಾರುಣ್ಯಸಿಂಧು ಮೋಕ್ಷಾಧೀಶ್ವರ ॥
ಸಿಂಧುಗಂಭೀರ ಆನಂದನಿಧಿ ಶರಣಜನ ।
ಮಂದಾರ ವಾಣೀಶ ಚಂದ್ರಶತಸಂಕಾಶ ।
ತಂದೆ ನೀನೊಲಿದು ಮನದಂದ ಸಲಿಸೆನಲಜಂ ಬಂದು ಮೈದೋರ್ದನವಗೆ ॥ 194 ॥

**ಭೈರವಿ - ಝಂಪೆ**

ನೋಡಿ ಜಯ ಜಯವೆನುತ | ಪಾಡಿ ಸಂಸ್ತುತಿಸುತೀ |
ಡಾಡಿ ಸಾಷ್ಟಾಂಗಕರ | ಜೋಡಿ ನಿಂದಿರಲು II 195 II
ಕಂಡು ಹರುಷವನು ಕೈ | ಕೈಗೊಂಡು ಮತ್ತಾ ಖಳನ |
ಮಂಡೆಯನು ಪಿಡಿದೆತ್ತಿ | ಕೊಂಡಾಡುತೆಂದ II 196 II
ಮೆಚ್ಚಿದೆನು ನಿನ್ನ ಮನ | ದಿಚ್ಛೆಯೇನುಂಟದನು |
ಉಚ್ಚರಿಸಲಾನೀವೆ | ನೀ ಕ್ಷಣದೊಳೆನಲು II 197 II
ಈ ಸಕಲ ಸುರನರರ | ನೀಶ ಮುಖ್ಯರ ಗೆಲುವ |
ಲೇಸಾದ ವರವಿತ್ತು | ನೀ ಸಲಹೆನಲ್ಕೆ II 198 ||

**ಭಾಮಿನಿ**

ಇಂತು ಪೇಳಲು ಕೇಳ್ದು ವಾಣೀ |
ಕಾಂತ ನಸುನಗುತೆಂದ ಹರನಲಿ |
ಮುಂತೆ ಜನಿಸುವ ಸುತ ಹೊರತು ಮಿಕ್ಕೆಲ್ಲ ಸುರನರರ II
ಸಂತತಿಯ ಗೆಲು ಹೋಗು ನೀ ನಿ |
ಶ್ಚಿಂತನಾಗೆನುತವಗೆ ಪೇಳಿದು |
ನಿಂತನಂತರ್ಧಾನದಲಿ ಖಳನಿಕರ ನಲಿದಾಡೆ II 199 ||

**ವಾರ್ಧಕ**

ನಕ್ಕನಾ ತಾರಕಂ ಸತಿಯಿಲ್ಲದೀಶಂಗೆ |
ಮಕ್ಕಳಾಗುವುದುಂಟೆ ಲೇಸಾಯ್ತು ವರಮೆನುತ |
ಮಿಕ್ಕ ದಾನವರಿಗಿದನರುಹಲ್ಕೆ ಖಳರು ಕೈಹೊಯ್ದು ನಸುನಗುತೆಲ್ಲರು II
ಲೆಕ್ಕವಿಲ್ಲದ ಸೈನ್ಯ ಗಜ ರಥ ತುರಂಗ ದಶ |
ದಿಕ್ಕುಗಳನಾವರಿಸಿ ಬಂದು ಕೂಡಲು ಸುರರ |
ಸೊಕ್ಕ ನಿಲಿಸುವೆವೆನುತ ಪೊಕ್ಕರಮರಾವತಿಯನೇನೆಂಬೆನದ್ಭುತವನು II 200 ||

**ಕಾಂಭೋಜಿ - ಝಂಪೆ**

ವಿದುರ ಕೇಳಿಂತು ಸುರಸದನಗಳ ಸುಟ್ಟು ವಿಧ |
ವಿಧದ ಲೂಟಿಗಳನೆಸಗಲ್ಕೆ II
ಅದುಭುತವಿದೇನೆನುತ ಸುರಪನೋಲಗಗೊಟ್ಟು |
ತ್ರಿದಶರನು ಕರೆವುತಿಂತೆಂದ II 201 II
ಏನೀದೇನೀ ಪರಿಯ ಹಾನಿ ಯಾರಿಂದಾಯ್ತು |
ದಾನವರದಾರು ಬಂದಿಹರು II
ಎನೊಂದನೆಮಗರುಹದೀ ನಗರಪೊಕ್ಕ ಹದ |
ನೇನೆನಲು ಸುರರೆಂದರಾಗ II 202 II
ಯಾರಾದರೇನು ತ್ರಿಪುರಾರಿಯಾದರು ಬಿಡೆವು |
ಕ್ರೂರಮತಿಗಳ ಬಗೆಯೆವೆನುತ II
ಭೂರಿ ಭಾಷೆಗಳ ಪೇಳ್ವನಿತರೊಳು ಬಂದಸುರರ |
ಚಾರಕರು ಪೇಳ್ದರಿಂದ್ರನಿಗೆ II 203 ||

**ಮುಖಾರಿ - ಏಕ**

ತೆಕ್ಕೊ ಸಲ್ಲಾಮು ಭಿರ್ರನೆ | ಸುರರಾಜ ಭೂಪ |
ತೆಕ್ಕೊ ಸಲ್ಲಾಮು ಭಿರ್ರನೆ ||
ಚಿಕ್ಕಮ್ಮನ ಸುತ | ರೆಷ್ಟಾದರು ನೀ |
ವಕ್ಕನ ಸುತರೆ | ಮ್ಮವರೀ ಪಟ್ಟವಿ |
ದಕ್ಕವರೇ ಸರಿ | ಯೋಗ್ಯರು ಸ್ವರ್ಗವ |
ನಾಕ್ರಮಿಸುವೆವೆಂ | ದಟ್ಟಿದರಿದಕೋ || ತೆಕ್ಕೊ || 204 ||
ಒಳ್ಳೆ ಮಾತಿನೊಳೀ ಪಟ್ಟಣವ | ಒಪ್ಪಿಸಿ ಸೇವೆ |
ಎಲ್ಲಾ ನೀ ಮಾಡಿಕೊಂಡು ದಿನವ ||
ನಿಲ್ಲದೆ ಕಳೆವುದಿ | ದೊಳ್ಳಿತು ಈ ಪರಿ |
ಯೆಲ್ಲವ ತಿಳುಹಿಸಿ | ನಿಲ್ಲದೆ ತಾರಕ |
ಬಲ್ಲಿದ ಕಳುಹಿದ | ನಲ್ಲದಿರಲು ನಿಮ್ಮ |
ಹಲ್ಲನು ಕಳಚುವ | ರಿಲ್ಲವೊ ಸಂಶಯ || ತೆಕ್ಕೊ || 205 ||
ಕಡೆಗೆ ನಾನೆಂದ ಮಾತಿದೆಲ್ಲ | ದಿಟವಪ್ಪುದೀಗ |
ನುಡಿ ನೂರದೇಕೆ ನಿಮ್ಮನೆಲ್ಲ ||
ಬಡೆವಾಲೋಚನೆ | ನುಡಿದತಿ ಸಿಟ್ಟಿನೊ |
ಳೊಡೆಯರು ಬಲ್ ಪಲ್ | ಗಡಿವರು ನಿಮ್ಮಯ |
ಸಡಗರವವರೋಳ್ | ನಡೆಯದು ಕಂಡುದ |
ನುಡಿದೆವು ಕೇಳ್ ಕೇಳ್ | ಕೆಡುವೆ ನಿರರ್ಥಕ || ತೆಕ್ಕೊ || 206 ||

**ಭಾಮಿನಿ**

ಚರರ ನುಡಿಯನು ಕೇಳ್ದು ನಗುತಲಿ |
ಸುರಪನೆಂದನು ಪಟ್ಟವಾಳ್ವರೆ |
ಪಿರಿಯರವರಹುದವರಿಗೀವೆವು ಸಮರಮಧ್ಯದಲಿ ||
ಸಿರಿಯ ಸಾಮ್ರಾಜ್ಯಗಳ ನೀವಿದ |
ನರುಹಿ ಕರೆತಹುದವರನೆಂದುಪ |
ಚರಿಸಿ ದೂತರ ಕಳುಹಿ ಸುರಪತಿ ಸುರರಿಗಿಂತೆಂದ || 207 ||

**ಸೌರಾಷ್ಟ್ರ - ತ್ರಿವುಡೆ**

ದುರುಳರೆಮ್ಮನು ರಣಕೆ ಕರೆದರು |
ಸುರವರರು ನೀವ್ ಕಂಡಿರೇ ಕೇ |
ಳ್ದಿರುವುದುಚಿತವಿದಲ್ಲ ಸೈನಿಕ | ಪೊರಡಲಿನ್ನು || 208 ||
ಅಷ್ಟದಿಕ್ಪಾಲಕರ ಸೈನಿಕ |
ವಷ್ಟದಿಕ್ಕಿಲಿ ಕವಿದು ಕಡಿಕಡಿ |
ದೊಟ್ಟಿ ಖಳಸಂತತಿಯ ಬಿಡದಿರಿ | ದುಷ್ಟಜನರ || 209 ||
ಎಂದು ಐರಾವತವನೇರ್ದು ಪು |
ರಂದರನು ಪೊರಡಲ್ಕೆ ನಿರ್ಜರ |
ವೃಂದ ನೆರೆದೊಗ್ಗಾಯ್ತು ಸನ್ನಹ | ದಿಂದ ಪೊರಟು || 210 ||
ಅಪಶಕುನವಾಯ್ತಪರಿಮಿತ ಶಶಿ |
ರವಿಗಳಡಗಲು ರುಧಿರಮಳೆ ಸಂ |
ಭವಿಸಿ ಕವಿದುದು ಧೂಮಕೇತುವು | ವಿವರಗಳನು || 211 ||
ಕಾಣುತಿದನನಿಮಿಷರು ಸುರರಿಗೆ |
ಹಾನಿ ತಪ್ಪದು ಶಿವ ಶಿವಾ ನಮ |
ಗೇನು ಗತಿಯೆಂದೆನುತ ಸುರಪತಿ | ತಾನೆ ಮರುಗೆ || 212 ||

**ವಾರ್ಧಕ**
ಆಗ ಸುರರೆಂದರಿವರಿಂದಲೇನಹುದಿನ್ನು |
ನಾಗಶಯನನ ಕೃಪೆಯೊಳರಿಗಳಂ ಸದೆ ಬಡೆದು |
ಸಾಗಿಸುವೆವಂತಕನ ಪುರಕೆಂದು ಸಂತೈಸಲಿತ್ತಲುಭಯ ಬಲೌಘವು ||
ಸಾಗರಗಳೆರಡು ತಮ್ಮೊಳು ಹಳಚುವಂತೆ ಬಲ |
ಸಾಗರಗಳೆರಡು ಹಳಚಿದುದಪರಿಮಿತ ರುಧಿರ |
ಸಾಗರಂ ಪರಿದು ಹೆಣರಾಸಿಯಾಯ್ತೇನೆಂಬೆ ಸಂಗ್ರಾಮದದ್ಭುತವನು || 213 ||

**ಮಾರವಿ - ಏಕ**
ಚೂಣಿಯೋಳೀ ಪರಿಯಾಗಲು ಜಂಭನು | ಕಾಣುತಲಾರ್ಭಟಿಸಿ ||
ಬಾಣವ ಸುರಿದಮರೇಂದ್ರನ ತಡೆದಾ | ದಾನವನಿಂತೆಂದ || 214 ||
ಫಡ ಫಡ ಸುರಪತಿ ಪಿಡಿ ಪಿಡಿ ಚಾಪವ | ನಡುನಡುಗುವೆಯೇಕೆ ||
ಅಡಗಲು ತಾಯ್ಪುಸಿರಿಂಬಿಲ್ಲವೊ ಕೇಳ್ | ನುಡಿ ನುಡಿಯೆನುತೆಚ್ಚ || 215 ||
ಏನೆಂದುಸಿರಿದೆ ಹೀನ ಖಳಾಧಮ | ಬಾಣದಿ ನಿನ್ನಸುವ ||
ಕೀನಾಶನ ಪುರಕಟ್ಟುವ ಬಗೆಯನು | ನೀ ನೋಡೆನುತೆಸೆಯೆ || 216 ||
ಈ ಪರಿ ತಮ್ಮೊಳು ಹಳಚಲು ಕೋಪಾ | ಟೋಪದೊಳಮರೇಂದ್ರ ||
ಶ್ರೀಪತಿಯಂಘ್ರಿಯ ನೆನೆದೆಚ್ಚವನ ಪ್ರ | ತಾಪದಿ ಕೆಡಹಿದನು || 217 ||
ಜಂಭನ ಮರಣವ ಕಾಣುತ ಪ್ರಳಯತ್ರಿ | ಯಂಬಕನಂದದಲಿ ||
ಜಂಭಾರಿಯ ತಡೆದೆಂದನುನು ತಾರಕ | ನಂಬನು ಸುರಿವುತಲಿ || 218 ||

**ದೇಶಿ - ಮಟ್ಟೆ**
ನಿಲ್ಲು ನಿಲ್ಲೆಲೊ | ಖುಲ್ಲ ಜಂಭನ |
ನಿಲ್ಲದೆಚ್ಚು ಕೆಡೆದ ಗರ್ವ | ವಿಲ್ಲ ತೋರಿಸು || 219 ||
ಬಗುಳಬೇಡೆಲೊ | ಭಂಡ ನಿನ್ನನು |
ಬಗಿದು ಭೂತನಿಕರಕೀವ | ಬಗೆಯ ನೋಡೆಲಾ || 220 ||
ಕೊಲ್ವೆ ನಿನ್ನನು | ಗೆಲ್ವೆ ಸುರರನು |
ಆಳ್ವೆ ಸ್ವರ್ಗವಿರದೆಯೆನುತ | ಪಲ್ಲ ಮೊರೆದನು || 221 ||
ಧೂರ್ತದಾನವ | ಮತ್ತತನದಲಿ |
ವ್ಯರ್ಥ ಕಾದಿ ಸ್ವರ್ಗ ಬಯಸಿ| ಸತ್ತು ಹೋಗುವೆ || 222 ||
ಎಂದು ತಮ್ಮೊಳು | ನಿಂದು ಹಳಚಲು |
ಸಿಂಧು ಕಳಕಿತಖಿಳ ಲೋಕ | ವೃಂದ ನಡುಗಿತು || 223 ||
ತಾರಕಾಖ್ಯನು | ಭೂರಿನೇತ್ರನ |
ಕ್ರೂರತರದೊಳೆಚ್ಚು ಕೆಡಹಿ | ಗಾರುಗೆಡಿಸಿದ || 224 ||

**ಶಂಕರಾಭರಣ - ಮಟ್ಟೆ**
ದಿವಿಜಪತಿಯು ಬೀಳೆ ಕಂಡು | ರವಿಕುಮಾರನು |
ದಿವಿಜ ವೈರಿಯೊಡನೆ ಕಾದಿ | ಬವಣೆಗೊಂಡನು ||
ಅವನ ಹರಿಬಕೆಂದು ಬಂದು | ಪವನಮಿತ್ರನು |
ಬರವ ಕೊಟ್ಟು ರಣದಿ ಕಾದಿ | ಮೂರ್ಛೆಗೊಂಡನು || 225 ||

ಬಳಿಕ ನಿಋುತಿ ಬಂದು ಕಾದಿ | ಬಳಲಿ ಬೀಳಲು |

ಕಲಿ ಕುಬೇರ ನಿಂತು ನೊಂದು | ಹಳಚಿ ಪೋಗಲು ||

ಜಲಧಿನಾಥನಯ್ದಿ ರುಧಿರ | ತಳೆದು ಮಲಗಲು |

ಕಲಹಮುಖದೊಳಾ ಸಮೀರ | ನೊಂದು ತಿರುಗಲು || 226 ||

**ಭಾಮಿನಿ**

ಜಲಜಸಂಭವನಿತ್ತ ವರದ |
ಗ್ಗಳಿಕೆಯೆಂತುಟೊ ದೇವತತಿ ಕಳ |
ವಳಿಸಿ ರುಧಿರಾಬ್ಧಿಯಲಿ ಮೈಮರೆದಿರ್ದುದಡಿಗಡಿಗೆ ||
ಕಲಹದಲಿ ಸುರಲೋಕಪಾಲರ |
ಗೆಲಿದು ಖಳ ನಿಂದಿರಲು ಕಂಡಾ |
ವಲವಿರೋಧಿಯು ನೋಡಿ ಪುನರಪಿ ಸಮರಕನುವಾದ || 227 ||

**ಭೈರವಿ - ಏಕ**

ನಿಲ್ಲೆಲೊ ತಾರಕ ನೀನು | ಸುರ |
ರೆಲ್ಲರ ಗೆಲಿದ ಗರ್ವವನು ||
ನಿಲ್ಲದೆ ತೋರಿಸು ಎನುತ | ಕಣೆ |
ಚೆಲ್ಲಲು ಕಾಣುತ ನಗುತ || 228 ||
ಜ್ಯೇಷ್ಠರು ನಾವ್ ಕೇಳೆಲವೊ | ಈ |
ಪಟ್ಟಕೆ ಯೋಗ್ಯರು ನೀವೋ ||
ಬಿಟ್ಟು ಕೊಡುವುದೀ ಪುರವ | ಬಡಿ |
ದಟ್ಟುವೆ ನಿಮ್ಮಯ ಕುಲವ || 229 ||
ಎಂದೆನುತೆರಡಂಬಿನಲಿ | ದೇ |
ವೇಂದ್ರನ ನೋಯಿಸಿ ಕನಲಿ ||
ಇಂದ್ರಾಸನವೇರ್ದಾಗ | ಜನ |
ವೃಂದಕಭಯ ಕೊಡುತಾಗ || 230 ||
ಚಾರು ಚತುರ್ದಶ ಜಗಕೆ | ಧೊರೆ |
ತಾರಕನೆಂದೆಂಬುದಕೆ ||
ಸಾರಿಸಿ ಡಂಗುರ ಹೊಯ್ಸಿ | ಅಧಿ |
ಕಾರವ ತಾನೇ ನಡೆಸಿ || 231 ||

**ವಾರ್ಧಿಕ**

ವಿದುರ ಕೇಳಸುರರಿಂತಾಳುತಿರೆ ಸ್ವರ್ಗಮಂ |
ತ್ರಿದಶರಡವಿಯ ಪೊಕ್ಕು ಬೆಂಡಾಗಿ ಬಸವಳಿದು |
ವಿಧವಿಧದ ಪರಿಭವವ ಕಮಲಜನಿಗರುಹಲ್ಕೆ ತನ್ನಿಂದಸಾಧ್ಯವೆನುತ ||
ಪದುಮಜಂ ಸಕಲ ದೇವರ್ಕಳೊಡಗೊಂಡು ವಾ |
ರಿಧಿಯ ತಡಿಗಯ್ದಿ ಮೊರೆಯಿಟ್ಟನಾ ತಾರಕನ |
ಮದಮುಖತನಂಗಳಂ ಬಣ್ಣಿಸುತ ಪಾಲಾಬ್ಧಿಶಯನನಂ ಪ್ರಾರ್ಥಿಸಿದರು || 232 ||

**ಸಾವೇರಿ - ತ್ರಿವುಡೆ**

ಪಾಹಿ ಕ್ಷೀರಾಬ್ಧಿವಾಸ | ಸಜ್ಜನಪೋಷ |
ತ್ರಾಹಿ ಮಾಧವ ಸರ್ವೇಶ ||
ತ್ರಾಹಿ ಸಚರಾಚರಭರಿತ ಖಗ |
ವಾಹನನೆ ಕರಿವರದ ಜಯತು ಮ |
ಹಾಹಿಶಯನ ಮುಕುಂದ ತ್ರಿಜಗ |
ನ್ಮೋಹನಾಕೃತಿರೂಪ ಜಯ ಜಯ || ಪಾಹಿ || 233 ||

ಶಂಕಚಕ್ರಾಬ್ಜಧರ | ಶೋಭಿಪ ಸರ್ವಾ |
ಲಂಕಾರ ಪೀತಾಂಬರ ||
ಪಂಕಜಾಕ್ಷನನಂತ ಸೂರ್ಯ ಶ |
ಶಾಂಕಶೋಭಿತ ದೇವ ಶ್ರೀವ |
ತ್ಸಾಂಕ ನಿರ್ಮಲಚರಣ ಜಯ ಜಯ |
ವೇಂಕಟಾಚಲ ಪಾಲಿಸೆಮ್ಮನು || ಪಾಹಿ || 234 ||
ಇಂತೆಂದು ಮೊರೆಯಿಡಲು | ಕೇಳುತಲಿ ಶ್ರೀ |
ಕಾಂತನು ಕರುಣದೊಳು ||
ಅಂತರಿಕ್ಷದಿ ತೋರಿಕೊಂಡನ |
ನಂತರೂಪ ಮಹಾಮಹಿಮ ವೇ |
ದಾಂತವೇದ್ಯನ ಕಂಡು ನುತಿಸಿ ಮ |
ಹಾಂತ ಭಕ್ತಿಯೊಳೆರಗುತಮರರು || ಪಾಹಿ || 235 ||

**ಭಾಮಿನಿ**
ಸುರರು ಜಯ ಜಯವೆನಲು ಮುಕುಳಿತ |
ಕರಸರೋಜದೊಳಜನು ಪದಸರ |
ಸಿರುಹಕೊಯ್ಯನೆ ಬಿನ್ನವಿಸಿದನು ತಾರಕಾಸುರನು ||
ಸುರತತಿಯ ಪರಿಭವಿಸಿ ಸ್ವರ್ಗದ |
ಸಿರಿಯನನುಭವಿಸುವನು ಖಳನೆಂ |
ದರುಹಲದ ಕೇಳುತ್ತ ನಸುನಗುತೆಂದನಸುರಾರಿ || 236 ||

**ಕೇದಾರಗೌಳ - ಅಷ್ಟ**
ಕೇಳು ವಿಧಾತ ನೀ ವರವಿತ್ತೆಬ್ಬಿಸಿದೆಯಾ |
ಖೂಳನ ಮೊದಲು ನೀನೆ ||
ಶೂಲಿಯಾತ್ಮಜನಿಂದ ಮರಣವಲ್ಲದೆ ಬೇರೆ |
ಸೋಲಿಸುವವರ ಕಾಣೆ || 237 ||
ಈಗಲಾ ಭವ ತಪಸಿನೊಳಿರ್ಪ ಮಾರನು |
ಪೂಗೋಲನೆಸಯಲಾಗಿ ||
ನಾಗಭೂಷಣ ತಪವಳಿದು ಪಾರ್ವತಿಯ ಸಂ |
ಭೋಗಿಪ ಮದುವೆಯಾಗಿ || 238 ||
ಆಗಲಾ ಗಿರಿಜೆಯ ಗರ್ಭದಿ ಮಗನು ಲೇ |
ಸಾಗಿಯೆ ಪುಟ್ಟಲಾತ ||
ಬೇಗದಿ ಖಳನ ಸಂಹರಿಸುವ ನಿಮ್ಮಿಷ್ಟ |
ವಾಗುವುದದರ ಮೇಲೆ || 239 ||
ಕೆಡಿಸು ತಪವನೆಂದು ನುಡಿದು ಮನ್ಮಥನಿಗೆ |
ಬಿಡದೆ ಬೋಧಿಸುತ ಬೇಗ ||
ಮೃಡನೆಡೆಗಟ್ಟೆರೆಂದೊಡನೆ ಶ್ರೀಮಾಧವ |
ನುಡಿದಂತರ್ಧಾನನಾದ || 240 ||

**ಭಾಮಿನಿ**
ಹರಿ ನಿರೂಪಿಸಿ ತೆರಳಲಿತ್ತಲು |
ಸರಸಿಜೋದ್ಭವನಮರಪತಿಯನು |
ಕರೆದು ನೀ ಪೋಗೀಗ ಮನ್ಮಥಗರುಹಿ ಪುರಹರನ ||
ವರ ತಪವ ಕೆಡಿಸೆಂದು ಬೋಧಿಸು |
ತ್ವರಿತದಲಿ ನಡೆಯೆಂದು ಕಳುಹಲು |
ಸುರಪ ಬಂದನು ಮೆರೆವ ಕುಸುಮಾವತಿಯ ಪಟ್ಟಣಕೆ || 241 ||

**ನಾದನಾಮಕ್ರಿಯೆ - ಅಷ್ಟ**

ರತಿಯ ಮೇಳದೊಳಿರ್ಪ ಕಾಮನು | ಸುರ |
ಪತಿಯ ಕಂಡಿದಿರೆದ್ದು ಪ್ರೇಮದಿ ||
ಅತಿಶಯಾಲಿಂಗನ ಗೆಯ್ಯುತ್ತ | ಪೇಳ್ದ |
ನತಿಮುದದಿಂದುಪಚರಿಸುತ್ತ || 242 ||
ಏನಾಗಬೇಕು ತನ್ನಿಂದಲಿ | ಬಂದು |
ದೇನು ಕಾರಣ ಪೇಳಿರಿಂದಿಲಿ ||
ಏನಿದಾಶ್ಚರ್ಯವೆಂದುಸಿರಲು | ಆ ಗೀ |
ರ್ವಾಣಪತಿಯು ಪೇಳ್ದನವನೊಳು || 243 ||

**ಸುರುಟಿ - ಏಕ**

ಲಾಲಿಸಿ ಕೇಳ್ ದಯದಿ | ಸದ್ಗುಣ | ಶೀಲ ಕೃಪಾಶರಧಿ ||
ಪೇಳುವೆ ತಾರಕ | ಖಿಳನುಪದ್ರವ | ಶ್ರೀಲೋಲಗೆ ನಾವ್ |
ಪೇಳಲು ಕೇಳುತ || ಲಾಲಿಸಿ || 244 ||
ಶಿವನಾತ್ಮಜ ಹೊರತು | ನೆರೆ ಗೆಲು | ವವರಿಲ್ಲವು ಬರೆತು ||
ಶಿವನಿಗೆ ತಪ ಸಂ | ಭವಿಸಿತ್ತದ ಕೆಡಿ | ಸುವ ಬಗೆಗಾ ಮಾ |
ಧವ ನಮಗರುಹಿದ || ಲಾಲಿಸಿ || 245 ||
ನಿನ್ನ ಶರವ ತೊಡಿಸಿ | ತಪವನು | ಚೆನ್ನಾಗಿಯೆ ಕೆಡಿಸಿ ||
ಸನ್ನುತ ಜನರನು | ಮನ್ನಿಪ ಬಿರುದನು | ನಿನ್ನದೆನುತ ಕರು |
ಣಾರ್ಣವ ಕಳುಹಿದ || ಲಾಲಿಸಿ || 246 ||

**ಭಾಮಿನಿ**

ಎನಲು ನಕ್ಕನು ತ್ರಿಪುರವೈರಿಯ |
ಕೆಣಕುವರೆ ನಾನೇತರವ ಶಿವ |
ಮುನಿದಡೀ ಮೂಜಗವ ಸುಡುವನು ನಿಟಿಲವಹ್ನಿಯಲಿ ||
ತೃಣವಿದಿರೆ ಕಲ್ಪಾಂತವಹ್ನಿಗೆ |
ಗುಣವೆ ನಿನಗೀ ಮಾತು ಲೋಕಕೆ |
ಸನುಮತವೆ ಲೇಸಲ್ಲ ಬೇಗದಿ ತೆರಳು ಮನೆಗೆಂದ || 247 ||

**ತೋಡಿ - ಅಷ್ಟ**

ಏನೆಂದೆ | ಕಾಮ | ಏನೆಂದೆ || ಪ ||
ಏನೆಂದೆ ಕಾಮ ಈ ಕಾಣುವ ಜನಕೆ |
ನೀನತಿ ನಗೆಗೇಡ ಮಾಡಿದೆ ದಿಟಕೆ || ಏನೆಂದೆ || ಅ. ಪ ||
ಅಜ ವಿಷ್ಣು ಮೊದಲಾದ ದೇವರ್ಕಳೆಲ್ಲ |
ನಿಜದಿ ನಿನ್ನೊಶವಾಗಿ ಸಿಲುಕಿಹರಲ್ಲ ||
ತ್ರಿಜಗವ ಗೆಲ್ವೆ ನಿನ್ನಂಬನು ಹೂಡಿ |
ರಜತಾದ್ರಿವಾಸಗೆ ಹೆದರಿದೆ ಹೇಡಿ || ಏನೆಂದೆ || 248 ||
ಹಿಂದೆ ದಧೀಚಿ ಜೀಮೂತವಾಹನರು |
ವೃಂದಾರಕರ ಕಾಯ್ದು ಕೀರ್ತಿಗೊಂಡಿಹರು ||
ಚಂದದಿ ಪರರ ಕಾಯ್ವುದ ಬಲ್ಲೆ ನೀನು |
ನೊಂದು ನಿನ್ನಂತೆ ಹಿಮ್ಮೆಟ್ಟಿದರೇನು || ಏನೆಂದೆ || 249 ||

**ಆರ್ಯಸವಾಯ್ - ಏಕ**

ಇಂತುಸಿರಲು ಮೈಯುಬ್ಬುತಲಾ ಸ್ಮರ |
ಸಂತಸದಿಂ ಭೋರ್ಗರೆವುತಲಿ ||
ಪಂಥದೊಳತಿ ಹೂಂಕರಿಸುತ ಸುರಪನಿ |
ಗಿಂತೆಂದನು ಬಲು ಶೌರ್ಯದಲಿ || 250 ||

**ಸೌರಾಷ್ಟ್ರ - ತ್ರಿವುಡೆ**

ಬಿಡು ಬಿಡೆಲವೋ ಲೋಕ ಮೂರನು |
ಬಿಡದೆ ಗೆಲ್ದ ಪರಾಕ್ರಮಿಗೆ ಈ |
ಮೃಡನಿದಿರೆ ಸರಳೆಚ್ಚಲಾ ಕಂ | ಗೆಡಿಸದಿರೆನು || 251 ||
ಹರನ ತಪವನು ಕೆಡಿಸಿ ನಾ ನಿ |
ರ್ಜರರ ಕಾಯ್ವೆಪೆ ನಂಬು ನೀನೆಂ |
ದಿರದೆ ನಂಬುಗೆಗೊಟ್ಟು ಸುರಪನ | ಭರದಿ ಕಳುಹಿ || 252 ||
ರತಿಯ ಗಲ್ಲವ ಸ್ನೇಹದಿಂದಲು |
ಗಿಸುತ ಪೇಳಿದ ಸುರರ ಸಲಹಲ |
ಸಿತಗಳನ ತಪ ಕೆಡಿಸಲಯ್ದುವೆ | ಹಿತದಿ ನಾನು || 253 ||
ಅಳಲದಿರು ಮನಸಿನಲಿ ತನ್ನ |
ಗ್ಗಳಿಕೆಯನು ನಾ ಮೆರೆಸಿ ಶಿವನನು |
ಗೆಲಿದು ಬಹೆನೆನಲೆಂದಳಾ ಸತಿ | ಯಳಲುತಾಗ || 254 ||

**ಕೇದಾರಗೌಳ - ಅಷ್ಟ**

ಹರಣವಲ್ಲಭ ಕೇಳು ತರವಲ್ಲ ನಿನಗೆ ಶಂ |
ಕರನೊಳು ಕಲಹವಿಂದು ||
ಉರಿಗಣ್ಣಿಗಂಜುವುದಖಿಳ ಲೋಕವು ಕಣ್ಣ |
ತೆರೆದು ಸುಡುವ ನಿನ್ನನು || 255 ||
ಕಿಚ್ಚುಗಣ್ಣವಗೆ ನಾ ಬೆಚ್ಚುವೆನೇ ಭಾರಿ |
ಹುಚ್ಚು ಮಾತಾಡುವೆಯ ||
ಮೆಚ್ಚಿಸಿ ಗಿರಿಜೆಯನೊಡಗೂಡಿಸುವೆ ನೋಡಿಂ |
ದೆಚ್ಚು ಶರಾವಳಿಯ || 256 ||
ಚಂದವೆ ರಮಣ ಕೇಳಭವನೊಡನೆ ಕಾದಿ |
ಹಿಂದೆ ಯಾರುಳಿದವರು ||
ಅಂಧಕಾಸುರ ಗಜದಾನವ ತ್ರಿಪುರ ಜ |
ಲಂಧರರೇನಾದರು || 257 ||
ಬಿಡು ಬಿಡು ನಿನ್ನಯ ನುಡಿಯ ಬ್ರಹ್ಮಾಂಡದಿ |
ತಡೆವರ್ ಯಾರೆನ್ನೆಸುಗೆ ||
ಹೊಡೆದು ಪೂಶರವನು ಮೃಡನ ತಪವನು ತಾ |
ಕೆಡಿಸುವೆ ನೋಡು ಮಿಗೆ || 258 ||
ಅಂತರಿಕ್ಷಗಳಣುರೇಣು ಚರಾಚರಾ |
ದ್ಯಂತದಿ ತುಂಬಿರುವ ||
ಅಂತಕಾಂತಕನೊಳು ಕಲಹ ಬೇಡೆಲೊ ಪ್ರಾಣ |
ಕಾಂತ ಮಹಾನುಭಾವ || 259 ||
ತಾರಕನುಪಟಳಕಾ ರುದ್ರನಿಗೆ ಸುಕು |
ಮಾರನು ಪುಟ್ಟಲಾಗಿ ||
ಈ ರೀತಿಯಪ್ಪಣೆ ಶ್ರೀರಮಾಧವನಾಜ್ಞೆ |
ಮೀರಲಾರೆನು ದಿಟವು || 260 ||

**ಭಾಮಿನಿ**
ಭೋಗಿಭೂಷಣಮನದ ತಪವನು |
ನೀಗಿಸದೆ ಬಿಡೆನತ್ತ ಸಾರೆಂ |
ದಾಗಲಿನಿಯಳ ಕಳುಹಿ ಬೀಳ್ಕೊಂಡನು ಸರಾಗದಲಿ ||
ಕೋಗಿಲೆಯ ಕೊಳವಕ್ಕಿ ಶುಕ ಪಿಕ |
ನಾ ಗಿಡುಗ ಹಂಸೆಯ ಚಕೋರ ಬ |
ಲೌಘ ಕೂಡಲ್ಕಿರದೆ ಬಂದೇರಿದನು ಮಣಿರಥವ || 261 ||

**ಮಾರವಿ - ಏಕ**

ಭೂರಿಪರಾಕ್ರಮಿ | ಮಾರ ಹಿಮಾಚಲ |
ದಾರಣ್ಯದಿ ಬರೆ | ಕ್ರೂರ ಶಾರ್ದೂಲ ಶ |
ರೀರದ ಚರ್ಮದಿ | ಘೋರ ತಪದಿ ವಿ |
ವಿಸ್ತಾರದೊಳಿಹ ತ್ರಿಪು | ರಾರರಿಯ ಕಂಡ || ಏನನೆಂಬೆ|| 262 ||
ಕಂತು ಬರಲು ವಿಪಿ | ನಾಂತರದೊಳು ಸುವ |
ಸಂತನು ಪೆರ್ಚಿ ಮ | ಹಾಂತನಿಲನು ದಿ |
ಗಂತದಿ ತುಂಬಿ ಪೂ | ಗಂತ ದಿಗಂತವ |
ತ್ಯಂತ ಶಿವನ ಮನ | ಭ್ರಾಂತಿಸಿದಾಗ || ಏನನೆಂಬೆ|| 263 ||
ಭಟ ಮನ್ಮಥ ಧೂ | ರ್ಜಟಿಯಿದಿರೊಳಗು |
ತ್ಕಟ ರೋಷದಿ ಮಿಗೆ | ಹಟದಿ ಪೂಶರವಾ |
ರ್ಭಟಿಸಿ ಬಿಡಲ್ಕಜ | ಘಟ  ಕಂಪಿಸೆ ಸುರ|
ಕಟಕವು ಬೆದರಿತೇನ್ | ಘಟಿಪುದೊ ಎನುತ|| ಏನನೆಂಬೆ|| 264 ||
ಹರನಾಕ್ಷಣ ಪೂ | ಶರ ತಾಗಲು ಭೋ |
ರ್ಗರೆವುತ ಪ್ರಳಯದ | ಪರಿ ರೌದ್ರವ ತಾ |
ಳ್ದಿರಿಸಿ ನಿಟಿಲಕ | ಣ್ದೆರೆಯಲುರಿಯ ಡಗೆ |
ಸ್ಮರನನು ಧಟ್ಟಿಸು | ತುರಿಸಿತು ಭರದಿ || ಏನನೆಂಬೆ|| 265 ||
ಭುಗು ಭುಗು ಚಿಟಿ ಚಿಟಿ | ಧಗ ಧಗ ಶಬ್ದದೊ |
ಳಗಲದೆ ಕಿಡಿಗಳ | ಹೊಗೆಯಲಿ ಸ್ಮರನನು |
ಮಿಗೆ ಸುಡಲಗ್ನಿಯ | ಧಗೆಗಂಜುತ ಸುರ |
ರುಗಳಾ ಶಿವನನು | ಮಿಗೆ ಪ್ರಾರ್ಥಿಸಿದರು || ಏನನೆಂಬೆ|| 266 ||

**ಭಾಮಿನಿ**
ಶತಮಖಾದಿ ಸಮಸ್ತ ಸುರಸಂ |
ತತಿಯು ಧ್ಯಾನಿಸಲಭವ ತಿಳಿದಾ |
ಶ್ರಿತರಿಗಭಯವನಿತ್ತು ತನ್ನುಗ್ರವನು ಪರಿಹರಿಸಿ ||
ಹಿತದಿ ತಪವನು ಬಿಟ್ಟು ಭೂಧರ |
ಸುತೆಯನರಸುತ ಪೋದನತ್ತಲು |
ರತಿ ಪ್ರಲಾಪಿಸಿ ಹಲುಬಿದಳು ಪ್ರಾಣೇಶನನು ನೆನೆದು || 267 ||

**ನೀಲಾಂಬರಿ - ಏಕ**

ಪತಿಯೇ ನೀ ಮಡಿದೆಯಲ್ಲ | ಅಯ್ಯಯ್ಯೋ ಮುಂದೆ |
ಗತಿಯ ತೋರಿಸು ಹೇ ನಲ್ಲ ||
ಕ್ಷಿತಿಗೆ ಭಾಸ್ಕರನೆ ನಿನ್ನ | ಲಾವಣ್ಯಕಿನ್ನು |
ಪ್ರತಿಯಿಲ್ಲವಲ್ಲ ರನ್ನ || 268 ||
ಎರೆಯ ನಿನ್ನಯ ಗುಣವು | ವರ್ಣಿಸುವರೆ |
ಉರಗೇಂದ್ರಗಸದಳವು ||
ಹೊರತೆನ್ನನಗಲುವೆಯ | ಇಂಥಾ ಮುನಿಸು |
ತರವಲ್ಲ ನಿನಗೆ ಪ್ರಿಯ || 269 ||
ಹರನೊಳು ಸಮರವಿಂದು | ಲೇಸಲ್ಲವೆಂದು |
ಅರುಹಲಿಲ್ಲವೆ ನಾನಂದು ||
ಪರರ ಕಾರ್ಯಕೆ ಲೇಸಾಗಿ | ನೀನಿಂತು ಕಾಯ |
ತೊರೆವರೆ ವ್ಯರ್ಥವಾಗಿ || 270 ||
ಯಾರಿಗುಸಿರಲಿದನು | ರಕ್ಷಿಸುವರಿ |
ನ್ನಾರು ಜಗದೊಳೆನ್ನನು ||
ಚಾರು ಶ್ರೀ ಮಾಧವನೆ | ಎನ್ನಯ ಆರ |
ಭಾರವ ನೋಡು ನೀನೆ || 271 ||

**ಭಾಮಿನಿ**

ಮರುಗಿ ಗೋಳಿಟ್ಟಳಲಿ ರತಿಯೀ |
ತರದಿ ಬಾಳಿರೆನೆಂದು ಮನ ನಿ |
ರ್ಧರಿಸಿ ಮೊರೆಯಿಡಲಾಗ ಹುಯ್ಯಲ ಕೇಳಿ ನಾರದನು ||
ಹರಿ ಮುಕುಂದ ಮುರಾರಿ ದಾಮೋ |
ದರ ದಯಾನಿಧಿಯೆಂದು ಸ್ಮರಿಸುತ |
ತ್ವರಿತದಲಿ ಬಂದಾಗ ಧೈರ್ಯವನರುಹಿದನು ಸತಿಗೆ || 272 ||

**ಜಂಗಲ್ - ಏಕ**

ಎತಕಳುವೆ ಬಿಡು ಶೋಕವ ರತಿ ಕೇಳ್ |
ಸಾಕು ಸುಮಂಗಲೆಯೆ ||
ಲೋಕೇಶನು ಬರೆದಂಥಾ ಬರೆಹ ನಿ |
ರಾಕರಿಸುವರ್ ಯಾರೆಲೆ ತಾಯೆ || 273 ||
ಅಸ್ಥಿರ ಸಚರಾಚರಗಳು ಮರಣ ಸ |
ಮಸ್ತರಿಗೊದಗಿಹುದು ||
ನಿತ್ಯನು  ಶ್ರೀಹರಿಯೊಬ್ಬನೆಯಲ್ಲದೆ |
ಧಾತ್ರಿಯೊಳಿನ್ನಾರನು ಬಿಡದು || 274 ||
ನೀರಮೇಲಣ ಬೊಬ್ಬುಳಿಯಂತಿದು ಸಂ |
ಸಾರ ಸ್ವಪ್ನದ ಗಂಟು ||
ಸೈರಿಸು ಎಂದೆಂದಿಗು ಸೀಮಂತಿನಿ |
ಕಾರಿಯವೆಲ್ಲವು ಮುಂದುಂಟು || 275 ||
ಪರ ಕಾರ್ಯಕ್ಕೋಸುಗ ನಿನ್ನರಸನು |
ಹರಣವಿತ್ತುದರಿಂದ ||
ಪರಮಾತ್ಮನ ದಯದಲಿ ಮುಂದೀತನೆ |
ವರನಾಗುವನಾ ಫಲದಿಂದ || 276 ||

**ಭಾಮಿನಿ**
ಇನಿತು ರತಿಯನೊಡಂಬಡಿಸಿ ಸುರ |
ಮುನಿಪ ತೆರಳಿಕ್ಕಿತ್ತ ಪಾರ್ವತಿ |
ತ್ರಿಣಯನನು ಭಜಿಸಿದಳು ದೃಢತರ ಭಾವಭಕ್ತಿಯಲಿ ||
ಹಣೆಗೆ ಭಸ್ಮವ ಧರಿಸಿ ದರ್ಭಾ |
ಸನ ನಿರಾಹಾರದಲಿ ಧ್ಯಾನಿಸು |
ವನುಪಮೆಗೆ ಗಡ ವಿಪ್ರ ರೂಪದೊಳಯ್ದಿ ಶಿವೆ ನುಡಿದ || 277 ||

**ಭೈರವಿ - ಅಷ್ಟ**
ಏತಕೀ ಭಂಗದೊಳು | ತಪವ ಮಾಳ್ಪು |
ದೇತರ ಬಯಕೆನ್ನೊಳು ||
ಈ ತೆರದೊಡಲ ದಂಡಿಸಿಯುಪವಾಸದೊ |
ಳೇತಕೆ ದಣಿವೆ ಪೇಳು || 278 ||
ಸಡಗರ ಮಾತಿದೇಕೆ | ಭೂಸುರ ಸಾರು |
ಮೃಡನೊಡಗೂಡಲಿಕೆ ||
ತೊಡಗಿರ್ಪೆ ತಪವನ್ನು ನುಡಿಸದೆ ಸಾರತ್ತ |
ನಡೆ ನಡೆ ಬೇಗೆಂದಳು || 279 ||
ನಿಟಿಲಾಕ್ಷಿಯುರಿವುತಿದೆ | ಆತಗೆ ಭಾವೆ |
ಜಟಿಯು ಶೋಭಿತವಪ್ಪುದೆ ||
ಕಟಿಗೆ ಸುತ್ತಿಹನು ವ್ಯಾಘ್ರದ ಚರ್ಮ ನಿನಗೆ ಸಂ |
ಘಟನೆ ಲೇಸಲ್ಲ ಕೇಳು || 280 ||
ಏಕಿಲ್ಲಿ ಬಂದೆಯಯ್ಯ | ನಿನ್ನಯ ಮಾತು |
ಸಾಕತ್ತ ನಡೆ ವಿಪ್ರಯ್ಯ ||
ಆ ಕಪರ್ದಿಯ ಜಟೆ ನಿಟಿಲಾಕ್ಷಿ ಹುಲಿಚರ್ಮ |
ಲೋಕರಕ್ಷಾರ್ಥವಯ್ಯ || 281 ||
ಬಾಲೆ ನೀ ಬಿಡು ಶಿವನ | ಇಂದ್ರನಿಗನು |
ಕೂಲೆಯಪ್ಪಂತೀ ಕ್ಷಣ ||
ಪೇಳಿ ಮಾಡುವೆ ದಿಗುಪಾಲ ಮೌಖ್ಯರ ನಿನ್ನ |
ಕಾಲಿಗೆರಗಿಸುವೆನು || 282 ||
ಕ್ರೋಧ ವರ್ಧಿಪುದೆನಗೆ | ಸುಮ್ಮನೆ ನಡೆ |
ಹಾದಿ ಹಿಡಿದು ಮನೆಗೆ ||
ಮಾಧವಮಿತ್ರ ಬಲ್ಲನು ಎನ್ನ ಮನವನ್ನು |
ಭೇದವಿಕ್ಕುವೆಯ ಹೀಗೆ || 283 ||

**ದ್ವಿಪದಿ**
ಗಿರಿಜಾತೆಯಿಂತು ದ್ವಿಜನೊಡನೆ ವಾದಿಸುತ |
ಪಿರಿದಾಗಿ ಶಿವನ ನಿಂದೆಯ ಕೇಳ್ದೆನೆನುತ || 284 ||
ಹರ ಹರಾ ತಪವ ಕೆಡಿಸಿದ ಪಾಪಿಯಿವನೆ |
ದುರುಳೆ ತಾನಾದೆನೆಂದೊರಲಿದಳು ಜಾಣೆ || 285 ||

**ಆನಂದಭೈರವಿ - ಏಕ**
ದೇವರ ದೇವನೆ ನಿನ್ನ |
ಭಾವದಿ ಭಜಿಸಿರೆ ಈ ವಿಪ್ರ | ನುಡಿಸಿದ |
ತಪವ | ಕೆಡಿಸಿದ || 286 ||

ಮಿಂದು ಹುಡಿಯೊಳ್ ಹೊರಳಿದಂತಾ |
ಯ್ಶಿಂದು ಪೂರ್ವಾರ್ಜಿತದೊಳೀನ | ನೊರೆದನು |
ಜಾತಿ | ಮರುಳನು || 287 ||
ಏಕೆ ಬಂದನಿವನಿಲ್ಲಿಗೆ |
ಶ್ರೀಕರ ಮಾಧವನ ಸಖನ | ಜರೆದನು |
ಮತಿಯ | ಮರೆದನು || 288 ||
ಮೀರಿ ಕಠಿನ ವಾಕ್ಯ ಕರ್ಣ |
ದ್ವಾರದಿ ಹೊಗಿಸಿದನಕಟ | ಕ್ರೂರನು |
ಅತ್ತ | ಸಾರನು || 289 ||

**ಭಾಮಿನಿ**
ಗಿರಿಜೆ ಮರುಗುತ ಶಿವನ ನಿಂದೆಯ |
ಬರಿದೆ ಕೇಳ್ದೆನೆನುತ್ತ ಮಗುಳುರು |
ತರದಿ ಸ್ನಾನವ ಗೆಯ್ದು ಹರಧ್ಯಾನದಲಿ ತಪವಿಡಿಯೆ ||
ಕರುಣನಿಧಿ ಸುರೆಧೇನು ಗಂಗಾ |
ಧರ ಸದಾಶಿವ ಮನದಿ ಕರಗುತ |
ಭರದಿ ನಿಜರೂಪಿಂದಲಾಕೆಯ ಕರವ ಪಿಡಿದೆಂದ || 290 ||

**ವಾರ್ಧಕ**
ತರುಣಿ ಬಿಡು ಶೋಕಮಂ ತಪವಿರ್ದು ದೇಹಮಂ |
ಬರಿದೆ ದಂಡಿಸಬೇಡ ನಿನ್ನರಸ ನಾನೆನುತ |
ಗಿರಿಜೆಯಂ ಸಂತವಿಸಲತ್ತ ಸುರರಂಬರದಿ ನೆರೆದು ಪೂಮಳೆಗರೆವುತ ||
ಸುರದುಂದುಭಿಯು ಮೊಳಗಲಲ್ಲಿಗಯ್ತಂದರಂ |
ಬುರುಹಭವ ಸುರಪ ಮುಖ್ಯಾಮರರು ಕೈಲಾಸ |
ಕಿರದೆ ದಂಪತಿಗಳಂ ಕೊಂಡೊಯ್ದರಲ್ಲಿ ವೈವಾಹಮಂ ಮಾಡಲೆಂದು || 291 ||

**ದ್ವಿಪದಿ**
ಕುರುಕುಲಾಗ್ರಣಿ ಕೇಳು ಸುರಪತಿಯ ಕರೆದು |
ಸರಸಿರುಹಭವನೆಂದನತಿ ಹರುಷವೆರೆದು || 292 ||
ಗಿರಿಸುತೆಯ ವೈವಾಹ ವಿರಚಿಸುವ ಬಗೆಗೆ |
ತರಿಸು ಪರಿಪರಿಯ ವಸ್ತುಗಳನೀ ಘಳಿಗೆ || 293 ||
ಪುರವ ಶೃಂಗರಿಸು ನವರತ್ನ ನಿರ್ಮಿತದಿ |
ತರುಣಿಯರು ಬರಲಿ ಶೃಂಗಾರವೈಭವದಿ || 294 ||
ಗಿರಿರಾಜನಿದ್ದೆಡೆಗೆ ಓಲೆ ಬರೆದಿಂದು |
ತ್ವರಿತದಿಂ ದಿಬ್ಬಣವ ಕೂಡಿ ಬರಲೆಂದು || 295 ||
ಎಂಬನಿತರೊಳು ಸುರಪ ಪುರವ ಶೃಂಗರಿಸಿ |
ಚಂದದಿಂ ಸಕಲ ವಸ್ತುವ ತಾನೆ ಬರಿಸಿ || 296 ||
ಕರಣಿಕರ ಮುಖದಿಂದ ಓಲೆಯನು ಬರೆದು |
ಗಿರಿಧರೇಂದ್ರಗೆ ಕಳುಹಲಿರದೆ ನಡೆತಂದು || 297 ||
ಸಭೆಯೊಳುತ್ಸಹದಿ ಲೇಖನವ ಕೊಡುತಂದು |
ವಿಭವದಿಂ ಪೇಳಿದರು ಚರರೆರಗಿ ನಿಂದು || 298 ||

**ದೇಶಿ - ಅಷ್ಟ**
ರಾಜ ಭೂಧರ ರಾಜಾಧಿಪತಿ ಮಹಾ |
ರಾಜ ಕೇಳ್ ನಿಮ್ಮೆಡೆಗೆನುತ ಸುರ |
ರಾಜ ಕಳುಹಿದನೆಮ್ಮನು || 299 ||

ನಿಮ್ಮ ಬಾಲಕಿಯೆಮ್ಮ ಮಹೇಶಗೆ |
ಸಮ್ಮತದಿ ವೈವಾಹ ವಿರಚಿಸ |
ಲೆಮ್ಮನಟ್ಟಿದನಿಲ್ಲಿಗೆ || 300 ||
ಓಲೆ ಕೊಟ್ಟಿಹನೀ ಕ್ಷಣ ಬಾಂಧವ |
ಜಾಲಸಹಿತಲೆ ಧೊರೆಯೆ ಪೊರಮಡು |
ಏಳೆನುತ ಕೈ ಮುಗಿದರು || 301 ||

**ಭಾಮಿನಿ**
ಎಂದು ಲೇಖನವಿತ್ತ ಚರರನು |
ಚಂದದಿಂ ಮನ್ನಿಸುತ ಗಿರಿಧರ |
ನಂದು ಕೌತುಕವೆತ್ತು ಮಂತ್ರಿಯ ಕರೆದು ಲೇಖನವ ||
ಮಂದಹಾಸದಿ ಕೊಡಲದನು ನೃಪ |
ವೃಂದ ಕೇಳಲು ಸಚಿವನತಿ ಮುದ |
ದಿಂದ ವಾಚಿಸಿ ಪೇಳಿದನು ಜನನಿಕರ ನಲಿದಾಡೆ || 302 ||

**ಕಾಂಭೋಜಿ - ಝಂಪೆ**
ಶ್ರೀಮತ್ಸಮಸ್ತ ಗುಣಭರಿತ ನಿರುಪಮಚರಿತ |
ಭೂಮಿಪಾಲರ ಶಿರೋರತುನ ||
ಆ ಮಹಾ ಗಿರಿರಾಜ ರಾಜರಿಂಗಜ ಸುರ |
ಸ್ತೋಮ ಬರೆದಿರ್ಪ ಪತ್ರಿಕೆಯು || 303 ||
ಕನ್ಯಕಾಮಣಿ ನಿಮ್ಮ ಸುತೆ ಶಿವನ ವಧುವಾದ |
ಳಿನ್ನು ಲಗ್ನವ ವಿರಚಿಸಲ್ಕೆ ||
ನಿರ್ಣಯಿಸಿದೆವು ನಾಳೆ ಪಂಚಮಿಯ ದಿನಕೆ ನೀವ್ |
ಚೆನ್ನಾಗಿ ಬಂಧುಬಾಂಧವರ || 304 ||
ಕೂಡಿಕೊಂಡಿರದೆ ದಿಬ್ಬಣಿಗರು ಸಮೇತ ದಯೆ |
ಮಾಡಿ ಬಂದೊಲಿದು ನಿಜಸುತೆಯ ||
ಮಾಡಿ ಲಗ್ನವ ಧಾರೆಯೆರೆದಿತ್ತು ನಡೆಸಿ ಕೃಪೆ |
ಮಾಡೆನುತ ಬರೆದ ಪತ್ರಿಕೆಯ || 305 ||
ಕಂಡು ಶೈಲಾಧಿಪತಿ ಶಿವನ ಕೃಪೆಯಾಯ್ತು ಭೂ |
ಮಂಡಲದೊಳಿರದಾರಿಗೆನುತ ||
ಚಂಡ ವಿಕ್ರಮ ತನ್ನ ಸುತೆಯ ಭಾಗ್ಯವ ನೆನೆದು ||
ಕೊಂಡಾಡಿ ಮಂತ್ರಿಗಿಂತೆಂದ || 306 ||

**ಕಾಂಭೋಜಿ - ಅಷ್ಟ**
ಮಂತ್ರೀಶ ಲಾಲಿಸೀ ಪರಿಯ | ಅಂತ |
ಕಾಂತಕನೊಲವಾದ ಬಗೆಯ ||
ಸಂತೋಷವೇನೆಂಬೆ ತ್ರಿಜಗವು ತೃಣ ಸುರ |
ಸಂತತಿಯ ಲೆಕ್ಕಿಸುವೆನೇ ದಿಟ |
ಕಂತುಹರಕೃಪೆಯೊಂದು ಸಾಲದೆ || 307 ||
ಓಲೆ ಬಂದಿದೆ ವೈವಾಹಿಕಕೆ | ಇದ |
ಕೇಳು ದಿಬ್ಬಣ ಪೋಗುವುದಕೆ ||
ಲೀಲೆಯಿಂದಖಿಳ ಭೂಪಾಲರ ನೆರಹಿಸು|
ವೇಳೆಗಳೆಯದೆ ಬಂಧುಬಾಂಧವ |
ಜಾಲ ಸಹಿತೀಕ್ಷಣವೆ ಪೊರಡಲಿ || 308 ||

ಬರೆದ ಲಗ್ನಕೆ ಧಾರೆಮಾಡಿ | ನಮ್ಮ |
ತರಳೆಯನಿತ್ತು ಮಾತಾಡಿ ||
ಹರನನುಗ್ರಹವ ಸಂಪಾದಿಸಿ ಬರಬೇಕು |
ಪೊರಡಲಖಿಳ ಸಮಸ್ತ ಬಂಧುಗ |
ಳರೆನಿಮಿಷದೊಳಗೆಂದು ಬೆಸಸಿದ || 309 ||

**ಸಾಂಗತ್ಯ - ರೂಪಕ**

ಎನಲೆಂದ ಮಂತ್ರೀಶ ಮುನಿಯೆಂದ ಮಾತು ಎ |
ಳ್ಳನಿತು ತಪ್ಪುವುದೆ ಮತ್ತಾತೆಯ ||
ಘನಭಾಗ್ಯವೈಸೆ ನಮ್ಮೆಲ್ಲರ ಸಲಹುವ |
ಚಿನುಮಯಮೂರ್ತಿ ಲೇಸಾಗಿ || 310 ||
ನವಖಂಡವಾಳ್ವ ಭೂಪಾಲರ ಕರೆಸಿದ |
ನವರತ್ನ ಖಚಿತ ಭೂಷಣದ ||
ಯುವತಿಯರತಿ ಚೆಲುವೆಯರಯ್ದೆ ಮದುವೆಯು |
ತ್ಸವಕೆಂದು ಕೂಡಿ ರಂಜಿಸಿತು || 311 ||
ಅಂಗ ಕಾಂಭೋಜ ಸೌವೀರ ಸೌರಾಷ್ಟ್ರ ಕ |
ಳಿಂಗ ಬರ್ಬರ ಕಾಶಿರಾಜ ||
ಬಂಗಾಳ ಪಾಂಡ್ಯ ಕೇರಳ ಮಾದ್ರಭೂಪರ |
ಪಂಗಡವಯ್ದಿತೊಗ್ಗಿನಲಿ || 312 ||
ಅತ್ರಿ ಭಾರದ್ವಾಜಾಂಗಿರಸ ಮಾರ್ಕಾಂಡೇಯ |
ಮಿತ್ರ ಸುಮಂತ ನಾರದರು ||
ಉತ್ತಮ ದ್ವಿಜಸಂಕುಲವನೇಕ ತ್ರೇತಾಗ್ನಿ |
ಹೋತ್ರಿಗಳಯ್ದಿತೊಗ್ಗಿನಲಿ || 313 ||
ಸತ್ತಿಗೆಯುಭಯ ಚಾಮರ ನಾನಾ ಬಿರುದು ಸ |
ಮಸ್ತ ಭೂಪರ ಸಮೂಹದಲಿ ||
ಮತ್ತಾ ಹಿಮಾದ್ರಿ ರಾಜನ ಸತಿ ಪೊರಟಳು |
ವಿಸ್ತಾರವೇನ ಬಣ್ಣಿಪೆನು || 314 ||
ಗಜ ರಥ ಕುದುರೆ ನಾನಾ ವಾದ್ಯಗಳ ಘೋಷ |
ವ್ರಜಸಮೂಹದಿ ಮಂತ್ರೀಶ್ವರರು ||
ಗಜರಿ ದಿಬ್ಬಣಿಗರ ನಡೆಸುತ ಬರುತಿರೆ |
ರಜತಾದ್ರಿಶಿಖರ ಕಾಣಿಸಿತು || 315 ||
ಆ ಸಮಯದಿ ಸುರನಿಕರವು ಸಹಿತಲಿ |
ಲೇಸಾದ ಬಿರುದು ಸಂಭ್ರಮದಿ ||
ವಾಸವನಯ್ದೆ ದಿಬ್ಬಣಿಗರನಧಿಕ ವಿ |
ಲಾಸದಿಂದಿದಿರುಗೊಳ್ಳುತಲಿ || 316 ||
ಅವರವರಿಗೆ ತಕ್ಕ ಪಡಿಬಿಡಾರಗಳನ್ನು |
ವಿವರಿಕೊಡಲು ಮಾರನೆಯ ||
ದಿವಸದಿ ಸಕಲ ಸಂಭ್ರಮದೋಲಗ ಕೊಟ್ಟ |
ವಿವರವನೇನ ಬಣ್ಣಿಪೆನು || 317 ||
ಪೃಥ್ವಿಪಾಲಕರು ಸಮಸ್ತ ದೇವರ್ಕಳು |
ಉತ್ತಮ ಮುನಿಗಳೊಪ್ಪಿರಲು ||
ಶಾಸ್ತ್ರೋಕ್ತ ವಿಧಿಯಿಂದ ಗುರು ಬೃಹಸ್ಪತಿ ಬಂದು |
ಬಿತ್ತರಿಸಿದ ಹೋಮಗಳನು || 318 ||

ತಾರತಮ್ಯಗಳಿಂದ ಸಭೆಯೊಳೆಲ್ಲರನುಪ |
ಚಾರವಗೆಯ್ದು ಪದ್ಮಜನು ||
ನಾರಿ ಪಾರ್ವತಿಯ ಶೃಂಗರಿಸಲ್ಕೆ ತನ್ನಯ |
ನಾರಿಗೆ ಪೇಳ್ದನುತ್ಸಹದಿ || 319 ||

**ಕೇದಾರಗೌಳ - ಏಕ**

ಶೃಂಗರಿಸಿದರಬಲೆಯರೊಲಿದು | ನಿತ್ಯ |
ಮಂಗಲೆಗಧಿಕ ವಿನೋದದೊಳುಲಿದು || ಶೃಂಗರಿಸಿ || ಪ |
ಮುತ್ತಿನ ಓಲೆ ಕರ್ಣದಿ ಪೊಳೆಯೆ |
ಉತ್ತಮ ಹಾರ ಪದಕವೆಸೆಯೆ ||
ರತ್ನದ ಕಡಗ ಕಂಕಣ ಹಿಂಬಳೆಗಳ |
ಹಸ್ತಕೆ ಇರಿಸಿ ಸಂಭ್ರಮದಿ || ಶೃಂಗರಿಸಿ || 320 ||
ಮಲ್ಲಿಗೆ ಹೂಮಾಲೆಯ ಮುಡಿಸಿ |
ನಿಲ್ಲದೆ ಕಸ್ತೂರಿಬೊಟ್ಟಿರಿಸಿ ||
ಪುಲ್ಲಾಕ್ಷಿಯ ಕರೆತರಲಾ ಸಭೆಯಲಿ |
ಝಲ್ಲೆನುತ ವಿಟರೆದೆ ಬಿರಿಯೆ || ಶೃಂಗರಿಸಿ || 321 ||

**ಭಾಮಿನಿ**

ಚರಣಕೆರಗಿದ ಸುತೆಯ ಧರಣೀ |
ಧರನು ತೆಗೆದಪ್ಪುತಲೆ ಮುದ್ದಿಸಿ |
ಕರದಿ ಹೂಮಾಲೆಯನು ಕೋಟೀಶ್ವರನ ಕೊರಳಿಂಗೆ ||
ಭರದಿ ಹಾಕೆಂದೆತ್ತಿಕೊಳಲಾ |
ಗಿರಿಜೆ ಪರಮೇಶ್ವರನ ಕೊರಳಲಿ |
ಮೆರೆವ ಹೂಮಾಲೆಯನು ಹಾಕಿದಳಮರತತಿ ನಲಿಯೆ || 322 ||

**ಧವಳಾರ - ತ್ರಿವುಡೆ**

ಆ ಸಮಯದಿ ಬಹು ವಾದ್ಯ ವಿ |
ಲಾಸದಿ ವಿಪ್ರರ ಮಂತ್ರದ |
ಘೋಷವು ಹೋಮಾರಚನೆಯು ||
ರಚನೆಯು ಸುರಸತಿಯರ ಗೀತೋ |
ಲ್ಲಾಸ ರಂಜಿಸಿತು ಸಭೆಯೊಳು || ಶೋಭಾನೆ || 323 ||
ಲಗ್ನ ಮುಹೂರ್ತದಿ ಭೂಪ ಸ |
ಮಗ್ರದಿ ದ್ವಿಜರಾನುಜ್ಞೆಯೊ |
ಳಗ್ನಿ ಸಾಕ್ಷಿಯಲೀ ಮಗಳನು ||
ಮಗಳನು ಶ್ರೀಮಹದೇವಗೆ |
ಶೀಘ್ರದಿ ಧಾರೆಯೆರೆದನು || ಶೋಭಾನೆ || 324 ||

**ವಾರ್ಧಕ**

ಆ ಸಮಯದಲಿ ದೇವದುಂದುಭಿಯು ಮೊಳಗಿತಾ |
ಕಾಶದಲಿ ಪುಷ್ಪವೃಷ್ಟಿಗಳಾಗಲಖಿಲ ಕಮ |
ಲಾಸನಾದ್ಯಮರತತಿ ತಾರಕನ ವಧೆಗೆ ಭುಲ್ಲವಿಸಿದರ್ ನಿಜಭುಜವನು ||
ಆ ಸಕಲ ಲೋಕಜನ ಸಂತೋಷಮಾಗೆ ಧರ |
ಣೀಸುರರಿಗಮಿತ ಧನಕನಕಾದಿ ವಸ್ತುಗಳ |
ಲೇಸಾಗಿ ಕೊಟ್ಟು ಧರಣೀವರರ ಸಕಲ ಜನಜಾಲಮಂ ಮನ್ನಿಸಿದನು || 325 ||

**ಧವಳಾರ - ಏಕ**

ವಾಣಿ ಮುಂತಾದ ನಾರಿಯರು |
ಸಾನುರಾಗದಿ ಪಾಡುತಲವರು |
ಭಾನುಪ್ರಭೆಯ ಹರಿವಾಣದೊಳಂದು |
ಏಣಾಕ್ಷಿಯರಾರತಿಗಳ ತಂದು |
ದಾನವಾರಾತಿಗೆ ಗಿರಿಜಾತೆಗೆ ಸು |
ಮ್ಮಾಳಾರತಿಯ ಬೆಳಗಿರೆ || ಶೋಭಾನೆ || 326 ||
ಇಂದುಶೇಖರನಿಗೆ ಶಿವೆಗೆ |
ಇಂದ್ರಾದಿ ಸುರವಂದಿತೆಗೆ |
ನಂದಿವರೂಥ ಸುಧಾಕರಧರಗೆ |
ಚಂದ್ರಾನನೆಗಾನಂದಭರಿತೆಗೆ |
ಸುಂದರ ರೂಪೆಗೆ ಸದ್ಗುಣಯುತೆಗಾ |
ನಂದದೊಳಾರತಿಯ ಬೆಳಗಿರೆ || ಶೋಭಾನೆ || 327 ||
ಆದಿಮೂರುತಿ ಶಂಕರಗೆ |
ವೇದವೇದ್ಯಗೆ ಶುಭಕರಗೆ |
ಮಾಧವ ಭಗಿನಿ ಸದಾಶಿವೆ ಉಮೆಗೆ |
ಸಾಧುಸಜ್ಜನರನು ಪೊರೆವ ಮಂಗಳೆಗೆ |
ಸಾದರದಲಿ ಸಲಹೆನುತ ವಿ |
ನೋದದೊಳಾರತಿಯ ಬೆಳಗಿರೆ || ಶೋಭಾನೆ || 328 ||

**ಭಾಮಿನಿ**

ಆ ಮಹೋತ್ಸವದೊಳಗೆ ವಿಪ್ರ |
ಸ್ತೋಮವನು ಮನ್ನಿಸಿ ಮಹೇಶ್ವರ |
ಹೇಮಧನಪರ್ವತವನಿತ್ತಮೃತಾನ್ನ ಭೋಜನದಿ ||
ಭೂಮಿಸುರರನು ಕಳುಹಿ ಬಂಧು |
ಸ್ತೋಮಕುಡುಗೊರೆಯಿತ್ತು ಹರುಷದೊ |
ಳಾ ಮಹೇಶನು ಬಳಿಕ ಕಳಿಹಿದನುಚಿತ ವಚನದಲಿ || 329 ||

**ನಾದನಾಮಕ್ರಿಯೆ - ಅಷ್ಟ**

ವರ ಚತುರ್ಥಿಯ ಮಹೋತ್ಸವದಲಿ | ಗಿರಿ |
ವರ ಬಂಧುಬಾಂಧವ ಜನದಲಿ ||
ಪರಿಪರಿಯೋಕುಳಿಯಾಡುತ್ತ | ಮಿಂದು |
ಸುರಯುವತಿಯರಲಂಕರಿಸುತ್ತ || 330 ||
ಮೃಷ್ಟಾನ್ನ ಉಂಡು ದೇವರ್ಕಳು | ಸಹ |
ಬೆಟ್ಟಾಧಿಪತಿ ಪೊರಟಾಗಲು ||
ತಟ್ಟನೆ ಹರನ ಬೀಳ್ಕೊಂಡರು | ತಮ್ಮ |
ಪಟ್ಟಣ ಸೇರ್ದರಂದಖಿಲರು || 331 ||
ಹರನಿತ್ತ ಗಿರಿಜಾತೆಸಹಿತಲಿ | ಬಹು |
ಸರಸಸಂಭೋಗಲೀಲೆಗಳಲಿ ||
ಪರಮೇಶನಿರುತಿರೆ ಗರ್ಭವ | ಸತಿ |
ಧರಿಸಿದಳೇನೆಂಬೆ ವಿಭವವ || 332 ||

**ವಾರ್ಧಕ**

ಗಿರಿರಾಜನಂ ಕರೆಸಿ ಸತಿಗೆ ಸೀಮಂತಮಂ ।
ವಿರಚಿಸುತ ಬೇಕಾದ ಬಯಕೆಯಂ ಸಲಿಸುತ್ತ ।
ಹರನಿರಲು ಪಡೆದಳುನ್ನತಪರಾಕ್ರಮಿ ಸುತನ ದೇವತತಿ ನಲಿದಾಡಲು ॥
ತರಳನಿಗೆ ವೀರಷಣ್ಮುಖನೆಂಬ ಪೆಸರಿಟ್ಟು ।
ಪರಿ ಪರಿಯ ವಿದ್ಯೆಗಳ ಕಲಿಸುತಿಹ ವೇಳೆಯಲಿ ।
ಹರನೆಡೆಗೆ ಸುರಪಾಲ ನಡೆತಂದು ಮಣಿದು ಕೈಮುಗಿದೆಂದ ಖಳರ ಭಯವ ॥ 333 ||

**ಮಧ್ಯಮಾವತಿ - ಏಕ**

ತ್ರಾಹಿ ಸದ್ಗುಣಧಾಮ ಪರಮ ನಿಸ್ಸೀಮ ।

ತ್ರಾಹಿ ಸಜ್ಜನಪ್ರೇಮ ಸುರ ಸಾರ್ವಭೌಮ ॥

ತ್ರಾಹಿ ಬಿನ್ನಪವ ಕೈಗೊಳು ಪೂರ್ಣಕಾಮ ।

ತ್ರಾಹಿ ನಮ್ಮೆಲ್ಲರ ಪೊರೆ ಶುಭನಾಮ ॥ 334 ॥

ತಾರಕಾಸುರನೆಂಬ ಖೂಳ ದಾನವನು ।

ಘೋರ ಕಾನನವನು ಪೊಗಿಸಿ ನಮ್ಮವನು ॥

ನಾರಿ ಮಕ್ಕಳು ಸಹಿತಖಿಲ ವಸ್ತುವನು ।

ಸೂರೆಗೊಂಡಾಳ್ವ ನಮ್ಮೂರ ಸ್ವರ್ಗವನು ॥ 335 ॥

ನಿಮ್ಮಾತ್ಮಸಂಭವ ಹೊರತು ಮಿಕ್ಕವರ ।

ಸುಮ್ಮಾನದಲಿ ಗೆಲ್ವ ವರವುಂಟು ಖಳರ ॥

ಶರ್ಮದಿ ಗೆಲಲು ನಿಮ್ಮಣುಗನ ಕಳುಹಿ ।

ನಮ್ಮ ಕಾವುದೆನ್ನುತ್ತಲೆರಗಿದ ತಿಳುಹಿ ॥ 336 ||

**ಭಾಮಿನಿ**

ನಕ್ಕನಸುರವಿರೋಧಿ ನಮ್ಮಯ ।
ಚಿಕ್ಕವನು ಸಂಗ್ರಾಮದಲಿ ಗೆಲ ।
ತಕ್ಕವನೆ ದಾನವರ ಗರ್ಜನೆ ಕೇಳಿ ಬೆದರ್ವನಲಾ ॥
ಮಕ್ಕಳಾಟಿಕೆಯಾಯ್ತು ಬಂದುದು ।
ಸೊಕ್ಕು ಬುದ್ಧಿಯೆನಲ್ಕೆ ಕೇಳ್ದು ಪ ।
ದಕ್ಕೆ ವಂದಿಸುತೆಂದನಾ ಬಾಲನು ಪರಾಕ್ರಮವ ॥ 337 ||

**ಮಾರವಿ - ಏಕ**

ಬಿಡು ಬಿಡು ಇಂಥಾ ನುಡಿಗಳ ತನ್ನನು ।

ಬಿಡು ಸಂಗರಕಿಂದು ॥

ಧಡಿಗ ಖಳಾಧಮರೊಡಲನು ಖಂಡಿಸಿ ।

ಕೆಡಹುವ ಬಗೆ ನೋಡು ॥ 338 ॥

ಶಾಕಿನಿ ಡಾಕಿನಿಯರಿಗೌತಣ ರಣ ।

ದೋಕುಳಿಯಾಡಿಸುವೆ ॥

ಆ ಖೂಳರ ಸದೆಬಡೆದಮರೌಘವ ।

ನಾಕದೊಳಿರಿಸುವೆನು ॥ 339 ॥

ಚಿಕ್ಕವನಹುದಲ್ಲೆಂಬುದನಸುರರ |

ಸೊಕ್ಕುಗಳನು ಮುರಿದು ||

ಸೌಖ್ಯವ ಮಾಡುವೆ ಸುರತತಿಗೆನುತ ಪ |

ದಕ್ಕೆರಗಲು ಕಂಡು || 340 ||

ಕಂದನ ನುಡಿಗತಿ ಸಂತೋಷಿಸುತಾ |

ನಂದದಿ ತೆಗೆದಪ್ಪಿ ||

ಚಂದದಿ ಗೆಲು ಹೋಗೆನುತಲಿ ಕಳುಹಿದ |

ನಂದನನನು ಪರಿಸಿ || 341 ||

**ಭಾಮಿನಿ**

ತರಳಸಹಿತಮರೇಂದ್ರ ಬಲ ಬಂ |
ದೆರಗಿ ಶಿವನನು ಬೀಳ್ಕೊಳುತ ಪರಿ |
ಪರಿಯ ವಾದ್ಯವನೇಕ ಸುರಸಂತತಿಗಳೊಗ್ಗಿನಲಿ ||
ನೆರೆದು ಬೊಬ್ಬಿರಿದಯ್ದಿ ದೂತರ |
ತ್ವರಿತದಿಂ ಕಳುಹಲ್ಕೆ ದಾನವ |
ರರಸನನು ಕಂಡೆಂದರಾ ಸುರರಾಹವಸ್ಥಿತಿಯ || 342 ||

**ಘರಜು - ಏಕ**

ಏಳು ನಿಂದಿರು ಮಹಾರಾಯ | ದಾನವರೆರೆಯ |

ಏಳು ನಿಂದಿರು ಮಹಾರಾಯ || ಪ ||

ಮೊದಲು ನಿರ್ಜರರನ್ನು | ಬೆದರಿಸಿ ಗೆಲ್ವಿಹ |

ರಿದಕೊ ಬಂದಿಹರೆಲ್ಲರು | ಸುಮನಸರು || ಏಳು || 343 ||

ಬಿಟ್ಟುಕೊಡುವುದಿಂದೀ | ಪಟ್ಟಣವಿಭವವ |

ಪೆಟ್ಟು ತಿನ್ನದೆ ಸುಮ್ಮನೆ | ನೀ ಧಿಮ್ಮನೆ || ಏಳು || 344 ||

ಸಿಟ್ಟಿನಿಂದಿಹರು ನ | ಮ್ಮಷ್ಟದಿಕ್ಪಾಲಕರು |

ಗುಟ್ಟನು ಕೇಳಿ ಬೇಗ | ಪೊರಡೀಗ || ಏಳು || 345 ||

**ಕಾಂಭೋಜಿ - ಝಂಪೆ**

ಚರರೆಂದ ನುಡಿ ಕೇಳಿ ಕಂಗಳಲಿ ಕಿಡಿಗೆದರಿ |
ದುರುಳರಾರ್ಭಟಿಸಿ ನಿಂದಿರಲು ||
ವರ ಕಾಲನೇಮಿ ಶಂಬರ ಮುಖ್ಯ ದಾನವರ |
ಕರೆದೆಂದನತಿ ಪರಾಕ್ರಮದಿ || 346 ||
ಕೇಳಿದಿರೆ ಭಟರು ಸುರಜಾಲವಿಂದಿನ ದಿನದಿ |
ಕಾಳಗಕೆ ಕರೆದರೆಮ್ಮವನು ||
ಖೂಳರವರಿಂಗೇನು ಶೌರ್ಯವೋ ತಿಳಿಯದೆನೆ |
ಕೇಳುತಿಂತೆಂದ ಶಂಬರನು || 347 ||
ಏನಾದರೇನು ಬಂದವರುಗಳ ತಲೆಗಡಿದು |
ಶೋಣಿತವ ಕುಡಿವ ಬಿರುದೆನಗೆ ||
ನೀನಿದಕೆ ಚಿಂತಿಸದೆ ಕಳುಹೆಮ್ಮ ಸಂಗರಕೆ |
ಹಾಣಹಾನಿಯ ಮಾಳ್ಪೆವೆನಲು || 348 ||

ಲೇಸನೆಂದಿರಿ ಬರಲಿ ನಮ್ಮವರ ಬಲವೆಂದು |
ತಾ ಸಮರಕನುವಾಗಿ ಪೊರಟು |
ಲೇಸಾಗಿ ನಡೆತರಲು ಬಂದವನ ರಾಣಿಯ ||
ಡೈಸುತಿಂತೆಂದಳಾತನೊಳು | 349 ||

**ಕೇದಾರಗೌಳ - ಅಷ್ಟ**

ಲೇಸಲ್ಲವಿಂದಿನ ಸಮರ ನಿನಗೆ ಪರ |
ಮೇಶನಾತ್ಮಜನಿಂದಲಿ ||
ನಾಶವೆಂಬುವ ವರವೈಸಲೆ ಸುಮನಸ |
ರೀಶನ ಸೇರ್ದರಂತೆ || 350 ||
ಆತಗೆ ಗಿರಿಜೆಯ ಗರ್ಭದಿ ಲೇಸಾಗಿ |
ಜಾತನು ಪುಟ್ಟಲಾಗಿ ||
ಆ ತರಳನ ತಂದು ನಿಲಿಸಿರ್ಪರಂತೆ ಈ |
ರೀತಿ ನಿಮ್ಮನು ಕೊಲ್ಲಲು || 351 ||
ಏನಾದರಪಜಯ ತಪ್ಪದು ಸುರರ ಸಂ |
ಧಾನಗೆಯ್ದೊಂದುಗೂಡಿ ||
ನೀನಿರ್ಪುದೊಳ್ಳಿತು ಕಲಹ ಬೇಡೆಂದು ಆ |
ಮಾನಿನಿ ಮರುಗಿದಳು || 352 ||
ಮರುಳೆ ಮಾನಿನಿ ಜಗವ ಹಿಂಡುವ ಸತ್ವ |
ವಿರುತಿರಲೆನಗಿಂದಿಲಿ ||
ತರಳನ ಭಯವುಂಟೆ ಹುಚ್ಚು ಮಾತಾಡದೆ |
ತೆರಳತ್ತ ಮನೆಗೆಂದನು || 353 ||

**ಸಾಂಗತ್ಯ - ರೂಪಕ**

ಸತಿಯಳ ಜರೆದು ಸೈನಿಕಸಹಿತಸುರಾಧಿ |
ಪತಿಯೆದ್ದು ಸಮರಕಯ್ತರಲು ||
ಪತಿಶೂನ್ಯೆಯಾಗಿರ್ಪ ಸತಿಯೊರ್ವಳಿದಿರಾಗಿ |
ಪಥದೊಳು ಬರೆ ಕಂಡರಾಗ || 354 ||
ಎಲೆಲೆ ದೂಡಿರೊಯೆಂದು ಲಲನೆಯ ದೂಡಿಸಿ |
ಖಳರು ಮುಂದಕೆ ನಡೆತರಲು ||
ತಲೆಯ ಮುಂಡನ ಗೈದು ತಿಲದರ್ಭೆ ಹಿಡಿದೊರ್ವ |
ನಲಗು ಭೂಸುರ ನಡೆತಂದ || 355 ||
ಕಂದು ಕೌತುಕ ತಾಳಿ ಬರಲೊರ್ವ ಕುಂಬಾರ |
ಭಾಂಡಗಳನು ಹೊತ್ತಯ್ತರಲು ||
ಭಾಂಡವನೊಡೆದು ಮುಂದಯ್ತರಲಿಂಧನ |
ಕೊಂದೊರ್ವ ಶೂದ್ರನಯ್ತಂದ || 356 ||

**ಸೌರಾಷ್ಟ್ರ - ತ್ರಿವುಡೆ**

ಇಂತು ಪರಿಪರಿಯಪಶಕುನವ |
ತ್ಯಂತವಾಗಿರೆ ಕಂಡು ಸೈನಿಕ |
ನಿಂತಿರಲು ತಾರಕನು ಮನದಲಿ | ಚಿಂತೆ ತಾಳ್ದು || 357 ||

ಏನಿದೇನಾಶ್ಚರ್ಯವಿದಕನು |
ಮಾನ ತಪ್ಪದು ಸುರರು ಶಿವ ಶಿವ |
ಏನು ಮಾರಣವೆಸಗಿ ಬಂದರೊ | ಕಾಣೆನೆನುತ || 358 ||
ಮರುಗಲಾ ಶಂಬರನು ಪೇಳ್ದನು |
ಸುರನರೋರಗರಖಿಲ ಲೋಕವ |
ನುರುಹಿ ನುಂಗುವ ಸತ್ತ್ವವಿರಲೀ | ಸುರರು ಪಾಡೆ || 359 ||
ಬಿಡು ಬಿಡೀ ಕ್ಲೇಶಂಗಳೆಂದನು |
ತೊಡಬಡಿಸಿ ಕರೆತರಲು ಸೈನಿಕ |
ನಡೆದು ಹೊಯ್ದಾಡುತ್ತ ರಕುತದ | ಕಡಲು ಮೆರಯೆ || 360 ||

**ಪಂಚಾಗತಿ - ಮಟ್ಟೆ**

ಏನನೆಂಬೆನುಭಯ ಸೈನ್ಯ | ಚೂಣಿಯುದ್ಧವಾಗಿ ಮುರಿದು |
ಶೋಣಿತಾಬ್ಧಿಯೊಳಗೆ ಮುಳುಗಿ | ಹಾನಿದೋರಲು ||
ಕಾಣುತಾಗ ತಾರಕನು ಕೃ | ಶಾನುರೂಪ ತಾಳಿ ಸುರರ |
ಸೇನೆಗಳನು ಮೆಟ್ಟಿ ಸದೆದು | ತಾನೆ ನಿಂದನು || 361 ||
ಎಲವೊ ಸುರಪ ಮೊದಲು ನಮ್ಮ | ಛಳವಿಗೊಟ್ಟು ಸೋತುಪೋಗಿ |
ಹಳುವ ಸೇರಿ ಮರಳಿ ಬಂದು | ಕಲಹಕೊದಗಿದೆ ||
ತಿಳುಹು ಧೈರ್ಯ ಪೇಳಿ ನಿನ್ನ | ನಿಲಿಸಿದವರ ತೋರು ನಿನ್ನ|
ತಲೆಯ ಕೊಂಬೆನೆನುತ ಕಣೆಯ | ಮಳೆಯ ಸುರಿದನು || 362 ||
ಛಲರೆ ಖೂಳ ಕೇಳು ನಿನ್ನ | ತಲೆಯ ಕಡಿವ ಸತ್ತ್ವವೊದಗಿ |
ಕಲಹಕೀಗ ನಿಂತೆವಿದನು | ತಿಳಿದುಕೊಳ್ಳೆಲಾ ||
ಗೆಲುವು ನಿನಗಸಾಧ್ಯ ಬರಿದೆ | ತಲೆಯ ಕೊಡುವೆಯೇಕೆ ಪೋಗು |
ಹಳುವ ಸೇರ್ದು ಬದುಕೆನುತ್ತ | ಘಳಿಲನೆಚ್ಚನು || 363 ||
ಇಂತು ತಮ್ಮೊಳುಸಿರಿ ಲಯಕೃ | ತಾಂತನತಿ ಪರಾಕ್ರಮದಲಿ |
ನಿಂತು ಹಳಚುತಿರ್ದರದನಿ | ನ್ನೆಂತು ಪೇಳ್ವೆನು ||
ಪಂಥದಿಂದ ಸುರಪನನು ಮ | ಹಾಂತ ಶರದಿ ಕೆಡಹಲೊಡನೆ |
ಕಂತುಹರನ ಸುತನು ರಣಕೆ | ನಿಂತನಾಕ್ಷಣ || ೩ || 364 ||

**ಭೈರವಿ - ಏಕ**

ಕ್ರೂರ ಖಳಾಧಮ ಕೇಳು | ವ್ಯಂ |
ದಾರಕರನು ಸಮರದೊಳು ||
ಗಾರುಗೆಡಿಸಿದಂದವನು | ದಿಟ |
ತೋರೆನ್ನುತ ಬಾಣವನು || 365 ||
ಸುರಿಯಲದನು ತರಿದೆಂದ | ನೀ |
ತರಳನು ಕೇಳೆಲೊ ಕಂದ ||
ಬರಿದೆ ನೀ ಮಡಿಯಲದೇಕೆ | ರಣ |
ತರವಲ್ಲವೊ ನಡೆ ಜೋಕೆ || 366 ||
ಬಾಲಕನಹುದಹುದಿನ್ನು | ಎನ್ನ |
ಬಾಲತ್ವದ ಲೀಲೆಯನು ||
ತಾಳರೆಗಳಿಗೆಯೊಳದನು | ಶರ |
ಜಾಲದಿ ತೋರಿಪೆ ನಾನು || 367 ||

ಎಂದೀರ್ವರು ಹೊಯ್ದಾಡಿ | ಸಾ |
ನಂದದಿ ಕಾದಲು ನೋಡಿ ||
ವೃಂದಾರಕರೊರಲಿದರು | ಶರ |
ವೃಂದದುರಿಗೆ ಬೆಚ್ಚಿದರು || 368 ||
ಬಳಕೆರಡಂಬಿನೊಳಾಗ | ಖಳ |
ತಿಲಕನನೆಚ್ಚಡೆ ಬೇಗ ||
ನಿಲಲಾರದೆ ಮೂರ್ಛೆಯಲಿ | ಕಳ |
ವಳಿಸಿದನವ ನೆಲಕುರುಳಿ || 369 ||

**ಶಂಕರಾಭರಣ - ಮಟ್ಟೆ**

ತಾರಕಾಖ್ಯ ಮೂರ್ಛೆಗೊಳಲು ವೀರ ಶಂಬರ |
ಆರುಭಟಿಸಿ ಪೇಳ್ದ ನಿನಗಿದೇಕೊ ಸಂಗರ ||
ಘೋರ ಸರಸವಲ್ಲ ಸಾರು ಸಾರೆನುತ್ತಲಿ |
ಭೂರಿ ಸರಳ ಸುರಿಯಲೆಂದ ಶೂರ ನಗುತಲಿ || 370 ||
ಎಲವೊ ವ್ಯರ್ಥ ಬಗುಳಿ ತಲೆಯ ಕೊಡುವೆಯೇತಕೊ |
ಕಲಹ ಮುಖದಿ ತರಳತನದ ಬಗೆಯ ನೋಡಿಕೊ ||
ತಿಳಿಯಲೀಗ ತೋರಿಕೊಡುವೆ ನಿಲ್ಲೆನುತ್ತಲಿ |
ಬಲುತರಾಸ್ತ್ರವೆಚ್ಚು ಮೂರ್ಛೆಗೊಳಿಸೆ ಕ್ಷಣದಲಿ || 371 ||
ಅವನ ಹರಿಬಕೆಂದು ಬಂದು ಕಾಲನೇಮಿಯು |
ಬವರಗೊಟ್ಟು ಬೀಳಲುಳಿದ ನಿವಹಶರಧಿಯು ||
ಶಿವಕುಮಾರನೊಡನೆ ಕಾದಿ ಕಂಡ ಮೈಯಲಿ |
ಬವಣೆಗೊಂಡು ಹಾಯ್ವರೇನನೆಂಬೆ ಕ್ಷಣದಲಿ || 372 ||

**ಭಾಮಿನಿ**

ಪ್ರಳಯ ಕಾಲದ ಶಿವನೊ ಮೇಣಾ |
ಕೊಲೆಗೆಲಸಕೊದಗಿರ್ದ ಜವನೋ |
ವಿಲಯಭೈರವನಳವಿಯೋ ಷಣ್ಮುಖನ ಸಂಗರವೋ ||
ತಿಳಿಯದೆನೆ ಸೈನಿಕವ ಕಡಿದೋ |
ಕುಳಿಯ ಮಾಡಲು ಕಂಡು ಖತಿ ಪ್ರ |
ಜ್ವಲಿಸಿ ತಾರಕ ಬಂದು ಪುನರಪಿ ಸಮರಕನುವಾದ || 373 ||

**ದೇಶಿ - ಅಷ್ಟ**

ನಿಲ್ಲು ನಿಲ್ಲೆಲೊ ಶಿಶುಹತ್ಯಪಾತಕ |
ಸಲ್ಲದೆನುತಲಿ ಬಿಟ್ಟುದಕೆ ನ |
ಮ್ಮಲ್ಲರನು ನೀ ಗೆಲ್ದೆಯ || 374 ||
ತಡೆದುಕೊಳ್ಳೆಲೊ ಬಾಣವನಿಂದಿಲಿ |
ಕಡಿದು ಬೂತಾಹುತಿಯ ಮಾಡುವೆ |
ಬೆಡಗ ನೋಡೆಂದೆಚ್ಚನು || 375 ||
ವ್ಯರ್ಥ ಸುಮ್ಮನೆ ಬಗುಳುವೆ ನಿನಗಿಂದು |
ಮೃತ್ಯು ನಾನೆಂಬುದನು ತಿಳಿದು ನಿ |
ರರ್ಥ ಕಾದುವುದೇಕೆಲ || 376 ||

ಆದಡೀಕ್ಷಿಸಂದೆನುತ ಮಹಾಸ್ತ್ರವ |
ಸೇದಿ ಕೆನ್ನೆಗೆ ಸೆಳೆದು ಬೊಬ್ಬಿರಿ |
ದಾ ದುರಾತ್ಮನನೆಚ್ಚನು || 377 ||
ಎಚ್ಚಡಾ ಶರವಸುರನ ಶಿರವನು |
ಕಚ್ಚಿ ಹಾರಿದುದಭ್ರಮಂಡಲ |
ಕಚ್ಚರಿಯಪಡಲೆಲ್ಲರು || 378 ||

**ಭಾಮಿನಿ**

ಬಾಣಮುಖದಲಿ ಕಡಿವಡೆದು ಗೀ |
ರ್ವಾಣವೈರಿಯ ತಲೆ ನಭಾಗ್ರದಿ |
ಶೋಣಿತವ ಸುರಿವುತ್ತ ಬಿದ್ದುದು ಧರಣಿಗೀ ಪರಿಯ ||
ಕಾಣುತಲಿ ಬಲಿ ಶಂಬರಾದ್ಯರು |
ಪ್ರಾಣವುಳಿದರೆ ಸಾಕೆನುತ ದು |
ಮ್ಮಾನದಲಿ ಮೈದೆಗೆದು ಹಾಯ್ದರು ಕಂಡ ಮೈಗಳಲಿ || 379 ||

**ಭೈರವಿ - ಝಂಪೆ**

ಇಂದ್ರಾದಿ ಸುರವರರು | ದುಂದುಭಿಯ ಮೊಳಗಿ ಸುಖ |
ದಿಂದ ಪೂಮಳೆಗರೆದ | ರೊಂದಾಗಿ ನಲಿದು || 380 ||
ಬಳಿಕ ಸ್ವರ್ಗದ ಸಿರಿಗೆ | ಬಲವೈರಿಯನು ನಿಲಿಸಿ |
ಚೆಲುವ ಪಟ್ಟವ ಕಟ್ಟಿ | ಗೆಲುವಿನಿಂದಾಗ || 381 ||
ಅವರವರ ವಸ್ತು ಸತಿ | ನಿವಹ ಮುಂತಾದುದನು |
ವಿವರಿಸುತ ಕೊಡಿಸಿದನು | ದಿವಿಜ ಸಂತತಿಗೆ || 382 ||
ಮಾಡಿದುಪಚಾರಗಳ | ಮನ್ನಣೆಯ ಕೈಗೊಳುತ |
ಗಾಢದಿಂದಮರತತಿ | ಗೂಡಿ ಸಂತಸದಿ || 383 ||
ತಂದೆಯಿದ್ದೆಡೆಗಯ್ದಿ | ಚರಣದಲಿ ತಲೆವಾಗಿ |
ಹಿಂದುಳಿಯದೆಲ್ಲವನು | ವಿವರಿಸಿದನಂದು || 384 ||

**ಭಾಮಿನಿ**

ಬಳಿಕ ಸಂತೋಷದಲಿ ಬಾಲನ |
ಸೆಳೆದು ಬಿಗಿದಪ್ಪುತಲಿ ದಿವಿಜಾ |
ವಳಿಯ ಮನ್ನಿಸಿ ಕಾಣಿಕೆಯ ಕೈಗೊಂಡು ಪರಶಿವನು ||
ಲಲನೆ ಸಹಿತುತ್ಸಹದೊಳಿರಲಾ |
ಗಳಿಗೆಯಲಿ ಸುರವನಿತೆಯರು ಪ್ರ |
ಜ್ವಲಿಸುವಾರತಿಗಳನು ಬೆಳಗಿದರತಿವಿನೋದದಲಿ || 385 ||

**ಮಂಗಲ**

**ಆಹೇರಿ - ಅಷ್ಟ**

ಮಂಗಳ ಶ್ರೀಮಹದೇವನಿಗೆ | ಜಯ |
ಮಂಗಲ ಗಿರಿಸುತೆಯರಸನಿಗೆ || ಮಂಗಲಂ || ಪ ||
ಭಕ್ತವತ್ಸಲನಿಗೆ ಮುಕ್ತಿದಾಯಕನಿಗೆ |
ನಿತ್ಯಮಂಗಲಗೆ ನಿರವಯವಗೆ ||
ಚಿತ್ತಜವೈರಿಗೆ ನಿರುಪಮರೂಪಗೆ |
ಕೃತ್ತಿವಾಸಗೆ ಸುರವಂದ್ಯನಿಗೆ || ಮಂಗಲಂ || 386 ||

ವ್ಯಾಳಕುಂಡಲನಿಗೆ ಬಾಲೇಂದುಧರನಿಗೆ |
ನೀಲಕಂಧರನಿಗೆ ನಿರುಪಮಗೆ ||
ಶೂಲಪಾಣಿಗೆ ಸುರಜಾಲವಂದಿತನಿಗೆ |
ಕಾಲಕಾಲಗೆ ಕರುಣಾಳುವಿಗೆ || ಮಂಗಲಂ || 387 ||
ಮುಪ್ಪುರನಾಶಗೆ ಮುಕ್ಕಣ್ಣಶಿವನಿಗೆ |
ಸರ್ಪಭೂಷಣನಿಗೆ ಶಂಕರಗೆ ||
ಅಪ್ಪ ನಮ್ಮೊಡೆಯ ಶ್ರೀ ನರಸಿಂಹಸಖನೆನಿ |
ಸಿಪ್ಪ ಶ್ರೀಕುಡುಮಪುರೇಶ್ವರಗೆ || 388 ||

**ಭಾಮಿನಿ**
ಸುರತತಿಯ ಬೀಳ್ಕೊಟ್ಟು ಕರುಣಾ |
ಶರಧಿ ಕೈಲಾಸದಲಿ ರಂಜಿಸಿ |
ಮೆರೆದ ಚಾರಿತ್ರವನು ಶ್ರೀಹರಿಯ ಕೃಪೆಯಿಂದ ||
ವಿರಚಿಸಿದೆ ಬಹುದೋಷವಿದರೊಳ |
ಗಿರಲದನು ಪರಿಹರಿಸುತೆನ್ನನು |
ಕರುಣದಲಿ ರಕ್ಷಿಸುಗೆ ಶ್ರೀ ನರಸಿಂಹ ತಾನೊಲಿದು || 389 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪಾವಂಜೆ ಸೇತು ಮಾಧವ ರಾವ್, ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ (ಇಸವಿ ೧೯೪೪)

**ಪ್ರಸಂಗ ಪ್ರತಿ ಆಧಾರ:** ಪಾವಂಜೆ ಸೇತು ಮಾಧವ ರಾವ್, ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ (ಇಸವಿ ೧೯೪೪) ಪ್ರಕಟಿತ ಪ್ರಸಂಗ

**ಪ್ರಸಂಗ ಪ್ರತಿ ಕೊಟ್ಟವರು:** ರವಿ ಮಡೋಡಿ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ರಾಮಕೃಷ್ಣ ಮರಾಠಿ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ ನಿರ್ವಹಣೆ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ